ಅಪರಂಜಿ

ಮಾರ್ಚ್ 2001

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಕು. ಗೋ

ಶೋಭಾ ಪ್ರಮೋದ್

ಡಾ|| ವೆಂಕಟರಮಣ

ಕಮಲಾ ರಾಮಸ್ವಾಮಿ

ಸವಿತಾ ನಾಗೇಶ್

ಪ್ರೇಮಾಭಟ್

ಬಿ. ಆರ್. ನಾಗೇಶ್

ಎಂ. ಎನ್. ಕೆ.

ಶಿವು

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail.com
website: aparanjimag.com

ವಿಳಾಸ : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 18 ಮಾರ್ಚ್ - 2001 ಸಂಚಿಕೆ -6

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



○ ಪ್ರಕಾಶ್

ಎಸ್.ಟಿ.ಡಿ. ಕಮಿಷನ್ ಹೆಚ್ಚಿಸದಿದ್ದರೆ ಚಳುವಳಿ ಬೆದರಿಕೆ

- ಸುದ್ದಿ

ಎಸ್ ಎಂದರಾಯಿತು!!

★★★

ಸರ್ಕಾರಿ ನೌಕರರು ಅನುಮತಿ ಇಲ್ಲದೆ ನಟನೆ ಮಾಡಬಾರದು

- ಸುದ್ದಿ

ಆಫೀಸುಗಳಲ್ಲಿ ಅವರು ಮಾಡುತ್ತಿರುವುದು ಇನ್ನೇನಂತೆ??

★★★

ಮುಜುಗರ ತಂದ ಸಚಿವರ ಹೇಳಿಕೆ, ರಾಜೀನಾಮೆ

- ಶೀರ್ಷಿಕೆ

ಮುಖ್ಯಮಂತ್ರಿಗಳು 'ಜಾ' ಅಂದರಂತೆ!!

★★★

ಮತ್ತಷ್ಟು ತೆರಿಗೆ; ಪ್ರಧಾನಿ ಇಂಗಿತ

- ಸುದ್ದಿ

ಇದರಿಂದ ಭೂಕಂಪ ಆಗಬಾರದು ಅಷ್ಟೆ!!

★★★

ವಿಕೆಟ್‌ನಲ್ಲಿ ಅಡಗಿರುವ ಮೈಕ್ ತೆಗೆಯಬೇಕು

- ಡೆವಿಸ್ ಲಿಲ್ಲೀ

ಬೇಡ, ಕ್ರಿಕೆಟ್‌ಗಿಂತ ಆಟಗಾರರ ಭಾಷೆಯೇ ಸ್ವಾರಸ್ಯಕರ!!

★★★

ವಿಜ್ಞಾನವನ್ನು ಮಾತೃಭಾಷೆಯಲ್ಲಿ ಹೇಳಿಕೊಡಬೇಕು

- ಶ್ರೀ ಯು.ಆರ್. ರಾವ್

ಈ ಭಾಷಣವನ್ನು ಅವರು ಇಂಗ್ಲಿಷ್‌ನಲ್ಲಿ ಕೊಟ್ಟಿದ್ದು ವಿಷಾದಕರ

★★★

ಭೂಕಂಪ ಸಂತ್ರಸ್ತ ನಿಧಿಗೆ ಕ್ಲಿಂಟನ್ ಸಹಾಯ

- ಸುದ್ದಿ

ಎಷ್ಟು ಟನ್ ಸಂಗ್ರಹಿಸುತ್ತಾರೋ??

★★★

ರಜನೀ ಕಾಂತ್‌ಗೆ ವಂಚನೆ; ಪಿ.ವಿ.ಎಸ್. ಪುತ್ರನ ಬಂಧನ

- ದಿನಪತ್ರಿಕೆ

'ನಟನೆ' ಅಂದರೆ ಇದೇ!!

★★★

ಸ್ವರ್ಗದಲ್ಲಿ ಭಿಕ್ಷೆ ಬೇಡುವುದಕ್ಕಿಂತ ನರಕದಲ್ಲಿ ರಾಜ್ಯಭಾರ ಮಾಡಲು ಇಷ್ಟಪಡುತ್ತೇನೆ.

- ಶಾರುಖ್ ಖಾನ್

ಅವರ ಸ್ವರ್ಗ - ನರಕಗಳ ಕಲ್ಪನೆ ನಿಜವಾಗಿಯೂ ಸಿನಿಮೀಯ!!

★★★

ಮಠ, ದೇವಸ್ಥಾನ ಕಪ್ಪು ಹಣದ ಕೇಂದ್ರಗಳು

- ಹೇಳಿಕೆ

ಭಗವಂತ ತಲೆ ತಗ್ಗಿಸಿದನಂತೆ!!

★★★

ನಮ್ಮ ನಮ್ಮಲ್ಲಿ

ಗಣರಾಜ್ಯೋತ್ಸವದಂದು ನಾಡಿನ ಎದೆ ನಡುಗಿ, ಜನತೆ ತಲ್ಲಣಗೊಳ್ಳುವ ವೇಳೆಗಾಗಲೇ ನಮ್ಮ ಫೆಬ್ರುವರಿ ಸಂಚಿಕೆಯ ಮುದ್ರಣದ ಪ್ಲೇಟ್‌ಗಳು ತಯಾರಿಯಲ್ಲಿದ್ದವು. ಹಾಗಾಗಿ ಆ ಸಂಚಿಕೆಯಲ್ಲಿ ಈ ಕುರಿತು ಬರೆಯಲಾಗಲಿಲ್ಲ. ಈ ದುರ್ಘಟನೆಗೆ ಒಂದು ದಿನ ಮುಂಚಿತವಾಗಿ ನಮ್ಮ ಇಂಗ್ಲಿಷ್ ಅತಿಥಿಗಳು ತಮ್ಮ ವಿಂಟರ್ ಹಾಲಿಡೇ ಮುಗಿಸಿ ತಾಯ್ನಾಡಿಗೆ ಹಿಂತಿರುಗಿದ್ದರು. ಸುಖವಾಗಿ ಊರು ಸೇರಿದೆವೆಂದು ಬರೆದ ಪತ್ರದ ಪ್ರಾರಂಭದಲ್ಲಿ ತಂಗಿ ಬಾರ್ಬರಾ, "Before I start however I should say how horrified we are at the news of the earthquake and the terrible devastation that it has wrecked. Normally on hearing of such disasters one feels sadness, but not involvement. In this case we feel both much more deeply." ಎಂದು ಬರೆದಿದ್ದಳು. ಆ ಪತ್ರ ಓದಿದ ಮೇಲೆ ನನಗೂ ಹಾಗೇ ಅನ್ನಿಸಿತು. ಬಡತನ, ಸಾವು ನೋವುಗಳನ್ನು ದಿನವಹಿ ನೋಡಿ, ಪತ್ರಿಕೆಗಳಲ್ಲಿ ಓದಿ, ಜಡ್ಡುಗಟ್ಟಿದ ನಮ್ಮ ಸಂವೇದನೆಗೆ involvement ಸುಲಭವಾಗಿ ದೊರಕುವ ಸರಕಲ್ಲ. ಮಧ್ಯ ಅಥವಾ ಇಳಿವಯಸ್ಸಿನಲ್ಲಿ ತನ್ನದು ಎನ್ನಬಹುದಾದ ಸಕಲ ಸರ್ವಸ್ವವನ್ನೂ ಕಳೆದುಕೊಂಡು, ದುರಾದೃಷ್ಟದಿಂದ ತಾನು ಬದುಕುಳಿದರೆ, ಅಂತಹ ಸಮಯದಲ್ಲೂ ಜೀವನೋತ್ಸಾಹವನ್ನು ಉಳಿಸಿಕೊಳ್ಳುವುದು ಸ್ಥಿತಪ್ರಜ್ಞರಿಗೆ ಮಾತ್ರಾ ಸಾಧ್ಯವಾದೀತು. ಪ್ಲೇಟ್ ಟೆಕ್ಟಾನಿಕ್ಸ್‌ನ ಈ ಕುರುಡುಗಣ್ಣಿನ ಆಟದ ದಾರುಣತೆಯನ್ನು ಭರಿಸಲು ನಮ್ಮ ಗುರ್ಜರ ಬಂಧುಗಳು ಮಾಡುತ್ತಿರುವ ಅಗಾಧ ಯತ್ನಕ್ಕೆ ಅಳಿಲು ಸೇವೆ ನಮ್ಮೆಲ್ಲರ ಆದ್ಯ ಕರ್ತವ್ಯ ಅನ್ನಿಸುತ್ತದೆ.

ನಮ್ಮ ನಡೆ ನುಡಿಗಳನ್ನು ಮೊಟ್ಟಮೊದಲ ಬಾರಿಗೆ ನೋಡಿದವರು, ನಮ್ಮ ಜೀವನ ರೀತಿಗೆ ಹೇಗೆ ಸ್ಪಂದಿಸುತ್ತಾರೆಂಬುದರ ಬಗ್ಗೆ ಒಂದು ಒಳನೋಟ ಸಿಕ್ಕಿದ್ದು ನನ್ನ ಇಂಗ್ಲಿಷ್ ಮಿತ್ರರೊಂದಿಗೆ ಮೈಸೂರು, ಬೇಲೂರು, ಹಳೇಬೀಡು ಓಡಾಡಿದಾಗ. ಈ ಸ್ಪಂದನ ಅವರವರ ಪೂರ್ವಾಗ್ರಹಗಳಿಗೆ ಅನುಗುಣವಾಗಿ ವಿವಿಧ ರೂಪ ಪಡೆಯುತ್ತಿತ್ತು. ತನ್ನ ಊರಾದ ಇಪ್ಸ್ವಿಚ್ಚಿನಲ್ಲಿ ಟೌನ್ ಕೌನ್ಸೆಲರ್ (ನಮ್ಮಲ್ಲಿನ ಕಾರ್ಪೊರೇಟರ್) ಆಗಿರುವ ಪೀಟರ್‌ಗೆ ನಮ್ಮ ಮನೆಯ ಮುಂದಿರುವ ಬಾಗಿಲು ತೆರೆದ ಟ್ರಾನ್ಸ್‌ಫಾರ್ಮರ್ ಮೇಲೆ ಕಣ್ಣು. ''ಯಾರಾದರೂ ಕೈತಪ್ಪಿ ಮುಟ್ಟಿದರೆ ಪ್ರಾಣಹಾನಿ ಆಗುಲ್ಲವೇ'' ಎಂಬುದು ಅವನ ಸಹಜ ಪ್ರಶ್ನೆ. ಸಮಾಜವಾದದತ್ತ ವಾಲಿರುವ ಬಾರ್ಬರಾಳ ದೃಷ್ಟಿಕೋನವೇ ಬೇರೆಯ

ರೀತಿಯದು. ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿನ ಭವ್ಯವಾದ ಇಸ್ಕಾನ್ ಮಂದಿರವನ್ನು ನೋಡಿದ ಮೇಲೆ, ''ಇಷ್ಟೇ ಹಣವನ್ನು ಬಳಸಿ ಯಾವುದಾದರೂ ಆಸ್ಪತ್ರೆಯನ್ನೋ, ಶಾಲೆಯನ್ನೋ ಕಟ್ಟಿಸಿದ್ದರೆ ನಿಮ್ಮ ದೇಶದ ಬಡಜನತೆಗೆ ಎಷ್ಟು ಸಹಾಯ ಆಗುತ್ತಿತ್ತು'' ಎಂದು ಉದ್ಗರಿಸಿದಳು. ಅಲನ್‌ಗೆ ನಮ್ಮ ವಿಧಿ ವಿಧಾನಗಳ ಬಗ್ಗೆ ಅದಮ್ಯ ಕುತೂಹಲ. ಅವನ ಪ್ರಶ್ನೆಗಳು ಡೌನ್ ಟು ಅರ್ತ್ ಆಗಿದ್ದವು. ''ಊಟ ಮಾಡುವಾಗ ಬಲಗೈಯ್ಯಲ್ಲೇ ಏಕೆ ಮಾಡಬೇಕು? ಎಡಗೈ ಏಕೆ ಬಳಸಬಾರದು'' ಎಂದು ಎಲೆ ಮುಂದೆ ಕುಳಿತಿದ್ದಾಗಲೇ ಕೇಳಲು ಶುರು ಮಾಡಿದ. ಹಾರಿಕೆಯ ಉತ್ತರ ಅವನಿಗೆ ಸಮಾಧಾನ ನೀಡಲಿಲ್ಲ. ಕೊನೆಗೆ ಮಾರನೆಯ ಬೆಳಿಗ್ಗೆ ಅತ್ಯಂತ ವಿವರವಾದ ಉತ್ತರವನ್ನು ಕೊಟ್ಟು ಅವನಿಂದ "What a hygenic way. Now I understand" ಎಂಬ ಪ್ರತ್ಯುತ್ತರ ಪಡೆದು ಈ ''ಎಡಗೈ ಪ್ರಸಂಗ''ವನ್ನು ಮುಗಿಸಬೇಕಾಯಿತು.

ಭಾಷೆಯ ಬಳಕೆಯಲ್ಲಿ ಹಲವು ಪ್ರಯೋಗಗಳು ನಮಗೆ ಅರಿವಿಲ್ಲದಂತೆಯೇ ಬೇರೆ ಭಾಷೆಗೆ ತರ್ಜುಮೆಯಾಗುತ್ತಿರುತ್ತವೆ. ಸನ್ ವ್ಯಾಲಿಯಲ್ಲಿ ಮಿತ್ರ ವಿಜಯೇಂದ್ರ ನಮ್ಮ ಅತಿಥಿಗಳಿಗಾಗಿ ಒಂದು ಸಂತೋಷಕೂಟ ಏರ್ಪಡಿಸಿದ್ದ. ಅಲ್ಲಿಂದ ಹಿಂತಿರುಗುವಾಗ ಬಾರ್ಬರಾ, ''ಕುಮಾರ್, ನಿನ್ನ ಗೆಳೆಯರು ಹಾಗೂ ಅವರ ಪತ್ನಿಯರು ಪರಸ್ಪರ ಮಾತನಾಡುವಾಗ ಬಾರಿಬಾರಿಗೆ 'ಅಲ್ಲವಾ' ಅಂತ ಹೇಳುತ್ತಿದ್ದರು. ಹಾಗೆಂದರೇನು ಅಂತ ಕೇಳಿದ್ದಕ್ಕೆ ''ನನ್ನ ಅಭಿಪ್ರಾಯಕ್ಕೆ ನಿಮ್ಮ ಸಮ್ಮತಿ ಇದೆ ತಾನೆ ಎಂದು ಸೌಜನ್ಯದಿಂದ ಕೇಳುವ ರೀತಿ'' ಎಂಬ ಉತ್ತರ ಬಂತು. ಇಂಗ್ಲೆಂಡಿನಲ್ಲಿ ಅನೇಕ ಭಾರತೀಯರು ಇಂಗ್ಲೀಷಿನಲ್ಲಿ ಮಾತನಾಡುವಾಗ "is'nt it" ಎಂಬ ಮಾತನ್ನ ಪದೇ ಪದೇ ಬಳಸುತ್ತಾರೆ. ಇದು ಎಷ್ಟು ಸಾಮಾನ್ಯ ಅಂದರೆ ಇಂಗ್ಲೀಷ್ ನಗೆಗಾರರು ಒಬ್ಬ ಇಂಡಿಯನ್ ಅನ್ನು ಅನುಕರಿಸುವ ಪಾತ್ರ ನಿರ್ವಹಿಸಬೇಕಾದರೆ ನಿಮಿಷಕ್ಕೊಮ್ಮೆ "is'nt it" ಎಂದು ಪ್ರಯೋಗಿಸಿ ತಮ್ಮ ನಟನೆಗೆ ಜೀವ ತುಂಬುತ್ತಾರೆ. ಇವತ್ತು ನನಗೆ ಅದರ ಕಾರಣ ತಿಳಿಯಿತು'' ಎಂದು ಹೇಳಿದಳು.

ನಮ್ಮ ಸಾಗರೋತ್ತರ ಅತಿಥಿಗಳನ್ನು ಮೈಸೂರಿಗೆ ಕರೆದೊಯ್ಯುವ ಮುನ್ನ ಒಂದು ರಾತ್ರಿ ಭೀಮೇಶ್ವರಿಯಲ್ಲಿ ತಂಗಿದ್ದೆವು. ಅದೊಂದು ಮರೆಯಲಾಗದ ಸಂಜೆ. ''ಗೋಲ್ ಘರ್'' ನಲ್ಲಿ, ಬಾಣಸಿಗ ಮಂಜುನಾಥ್ ನೀಡಿದ ಪೂರಿ, ಸಾಗು, ಉಪ್ಪೇರಿ ಮೊಸರನ್ನಗಳನ್ನು ಗಡದ್ದಾಗಿ ತಿಂದು, ಆಚೆ ಹಾಕಿದ್ದ ಕ್ಯಾಂಪ್ ಫೈರ್ ಸುತ್ತ ನಾವೆಲ್ಲಾ ಕುಳಿತಿದ್ದೆವು. ಪಕ್ಕದ ಗುಡಿಸಲಿನ ರೋಜರ್ ಸಹಾ ನಮ್ಮ ಗುಂಪನ್ನು ಸೇರಿದ್ದ. ಮೀನುಗಾರಿಕೆ ರೋಜರನ ಹವ್ಯಾಸ. ಪ್ರತಿ ವರ್ಷ ಜನವರಿ

ತಿಂಗಳಿನಲ್ಲಿ ಹತ್ತು ದಿನಗಳ ಕಾಲ ಭಾರತಕ್ಕೆ ಭೇಟಿ ನೀಡಿ, ಕಾವೇರಿಯಲ್ಲಿ ಮೀನು ಹಿಡಿದು, ಪುನಃ ಅದನ್ನು ನೀರಿಗೆ ಬಿಟ್ಟು ಊರಿಗೆ ಮರಳುತ್ತಿದ್ದ ರೋಜರ್‌ಗೆ ಭಾರತದ ಮೇಲೆ ತುಂಬು ಅಭಿಮಾನ, ''ಇಲ್ಲಿನ ಜನರ ಸೌಜನ್ಯ, ನಿಷ್ಕಳಂಕ ಸ್ನೇಹ ಬೇರೆ ಎಲ್ಲೂ ಕಾಣಲಾಗದು'' ಎಂಬುದು ಅವನ ಅಭಿಮತ. ಮಾತನಾಡುತ್ತಿದ್ದಂತೆ ಬೇರರ್ ಕಾಳಪ್ಪ ಮೂರು ಬಾಟಲ್ ಕಿಂಗ್ ಫಿಷರ್ ತಂದು ಐದು ಜನಕ್ಕೆ ಸಮನಾಗಿ ಹಂಚಿ ಹೋದ. ಮೇಲೆ ಶಾಯಿನೀಲಿಯ ಆಗಸದಲ್ಲಿ ಅಲ್ಲೊಂದು ಇಲ್ಲೊಂದು ಚುಕ್ಕಿಗಳು ಹೊಳೆಯುತ್ತಿದ್ದವು. ಪೀಟರ್, ಪಕ್ಕದಲ್ಲಿದ್ದ ಸೌದೆಯ ತುಂಡೊಂದರಿಂದ ಬೆಂಕಿಯನ್ನು ಕೆದಕಿ, ನಂತರ ಅದನ್ನೇ ಪೂರ್ಣಾಹುತಿ ಮಾಡಿದ. ಪ್ರಜ್ವಲಿಸಿದ ಬೆಂಕಿಯ ಬೆಳಕಿನಲ್ಲಿ ಸುತ್ತಲಿನ ಮುಖಗಳು ಕೆಂಪಾದವು.

ಬಾರ್ಬರಾ ಹೇಳುತ್ತಿದ್ದಳು. ''ರೋಜರ್ ಅವರೇ, ಭಾರತಕ್ಕೆ ಇದು ನಮ್ಮ ಮೊದಲ ಭೇಟಿ. ಆದರೆ ಭಾರತೀಯರ ಸ್ನೇಹಪರತೆ ನಮಗೇನೂ ಹೊಸದಲ್ಲ. ಕೂಮರ್‌ನೊಂದಿಗೆ ನಮ್ಮೆಲ್ಲರ ಗೆಳೆತನ ಮೂರು ದಶಕಗಳಿಗೂ ಮಿಕ್ಕಿದ್ದು. ಆದರೆ ಕಳೆದ ಹಲವು ದಿನಗಳು ಈ ನಾಡಿನಲ್ಲಿ ಓಡಾಡಿದಾಗ ನಾನು ಕಂಡ ಬಡತನ, ಹಸಿವು, ಇವುಗಳನ್ನು ಈ ಜನ ಏಕೆ ಸಹಿಸಿಕೊಂಡಿದ್ದಾರೆ? ಹಣವಂತರಿಂದ ಮೂಲಭೂತ ಬದಲಾವಣೆ ನಿರೀಕ್ಷಿಸುವುದು ಆಗದ ಹೋಗದ ಮಾತು. ಇಲ್ಲಿನ ಅಸಂಖ್ಯಾತ ಬಡಜನತೆ ಏಕೆ ಬಂಡಾಯ ಎದ್ದಿಲ್ಲ ಎಂಬುದು ಆಶ್ಚರ್ಯದ ಸಂಗತಿ. ನಮ್ಮ ಕ್ರಾಂವೆಲ್ ಅಂತಹ ಧುರೀಣರನ್ನು ಈ ನಾಡು ಏಕೆ ಸೃಷ್ಟಿಸಿಲ್ಲ? ಜನರ ಸಹನೆ ಸಂಯಮಕ್ಕೂ ಒಂದು ಮಿತಿ ಬೇಡವೇ?'' ಪೀಟರ್ ತನ್ನ ಪತ್ನಿಯ ಮಾತನ್ನು ಮುಂದುವರಿಸುತ್ತಾ,

''ಕ್ರಾಂವೆಲ್ ಅಂದಾಗ ನೆನಪಿಗೆ ಬಂತು. ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ನಮ್ಮ ದೇಶದ ಸ್ಥಿತಿ ಈಗಿನ ಇಲ್ಲಿನ ಪರಿಸ್ಥಿತಿಗಿಂತ ಭಿನ್ನವಾಗೇನೂ ಇರಲಿಲ್ಲ. ನಮ್ಮ ಜಮೀನುದಾರರು ಬಡಜನತೆಯ ಶೋಷಣೆಯನ್ನು ಒಂದು ಧ್ಯೇಯದ ಹಂತಕ್ಕೆ ತಂದಿದ್ದರು. ಅವರಿಗೆ ಅವರು ಮಾಡಿದ್ದೇ ಕಾನೂನು. ಅವರೇ ಕಾನೂನು ಪಾಲಕರಾಗಿದ್ದರಿಂದ ಇದು ಅವರಿಗೆ ಸುಲಭವಾಗಿತ್ತು. ಹೇಗೂ ಅವರೆಲ್ಲಾ ರಾಜನಿಗೆ ಪೊಗದಿ ಕೊಡುತ್ತಿದ್ದುದರಿಂದ ರಾಜನ ಆಳ್ವಿಕೆ ಈ ಹಣವಂತರ ಕೈಯ್ಯಲ್ಲೇ ಇತ್ತು ಅಂದರೆ ತಪ್ಪಾಗಲಾರದು. ಅಂತಹ ಪರಿಸ್ಥಿತಿಯಲ್ಲಿ ನಮ್ಮ ಸಮಾಜ ಕ್ರಾಂವೆಲ್ ಅಂತಹ ಧೀರರಿಗೆ ಧುರೀಣತ್ವ ನೀಡಿತು. ಮುಂದಿನದ್ದೆಲ್ಲಾ ಚಾರಿತ್ರಿಕ ದಾಖಲೆಗಳಾಗಿ ಹೋದವು. ಯಾಕೆ ಹೇಳುಕ್ಕೆ ಬಂದೆ ಅಂದರೆ, ಯಾವ ಜನತೆಯೂ ಎಲ್ಲಾ ನಮ್ಮ ಹಣೇಬರಹ ಎಂದು ಕೈಚೆಲ್ಲಿ ಕೂರುವ ಅಗತ್ಯವೇ ಇಲ್ಲ. ಒಬ್ಬ ನಿಃಸ್ವಾರ್ಥಿ ಧುರೀಣ ಒಂದು ಸಮಾಜವನ್ನೇ

ಬದಲಿಸಬಹುದು...'' ಎನ್ನುತ್ತಿದ್ದಂತೆ, ಈತನಕ ಸುಮ್ಮನಿದ್ದ ರೋಜರ್ ಬಾಯಿ ಹಾಕಿದ.

''ಪೀಟರ್, ಕಳೆದ ಹತ್ತು ವರ್ಷಗಳಿಂದ ನಾನು ಈ ನಾಡಿಗೆ ತಪ್ಪದೇ ಬರುತ್ತಿದ್ದೇನೆ. ಮೂಲಭೂತ ಪ್ರಗತಿ ಇಲ್ಲಿ ಅಚ್ಚರಿಯೆನಿಸುವಷ್ಟು ಸಾಗಿದೆ. ಇಲ್ಲಿನ ನ್ಯಾಯಾಂಗದ ಸ್ವಾತಂತ್ರ್ಯ ಯಾವುದೇ ಮುಂದುವರಿದ ರಾಷ್ಟ್ರಕ್ಕೆ ಕಡಿಮೆಯಿಲ್ಲ. ಈ ದೇಶದ ಬಡತನದ ಮುಖ್ಯ ಸಮಸ್ಯೆಯೆಂದರೆ, ಇಲ್ಲಿನ ಆರ್ಥಿಕ ತಳಹದಿ ತೀರಾ ಕೆಳಮಟ್ಟದಲ್ಲಿ ಪ್ರಾರಂಭವಾದದ್ದು... ಗಾಂಧಿ ಈ ನಾಡಿಗೆ ಸ್ವಾತಂತ್ರ್ಯ ತಂದುಕೊಟ್ಟಾಗ ಭಾರತ ಹದಿನೇಳನೆಯ ಶತಮಾನದ ಇಂಗ್ಲೆಂಡಿನಷ್ಟು ಶ್ರೀಮಂತ ರಾಷ್ಟ್ರ ಖಂಡಿತ ಆಗಿರಲಿಲ್ಲ. ಅಂದಹಾಗೆ ಕ್ರಾಂವೆಲ್‌ನಷ್ಟೇ ನಿಃಸ್ವಾರ್ಥಿ ಧುರೀಣ ಗಾಂಧಿಗೆ ಜನ್ಮ ಕೊಟ್ಟ ನೆಲ ಇದು. ಇನ್ನು ಅರ್ಧ ಶತಮಾನದಲ್ಲಿ ಈ ನಾಡು ಯಾವುದೇ ಮುಂದುವರಿದ ದೇಶದ ಸಾಲಿನಲ್ಲಿ ನಿಲ್ಲುತ್ತದೆ ಎಂಬುದು ನನ್ನ ಖಚಿತ ನಂಬಿಕೆ.''

ಎಲ್ಲ ಮಾತುಗಳನ್ನೂ ತದೇಕ ಚಿತ್ತದಿಂದ ಕೇಳುತ್ತಿದ್ದ ಅಲನ್,

''ಕೂಮರ್, ನೀನ್ಯಾಕೆ ಸುಮ್ಮನೆ ಕುಳಿತಿದ್ದೀ. ನಿನ್ನ ಅನಿಸಿಕೆ ಏನು?'' ಎಂದು ಕೇಳಿದ.

ಪೂರ್ವ ದಿಕ್ಕಿನಲ್ಲಿ ಹರಡಿದ್ದು ಬೆಟ್ಟಸಾಲಿನ ಕಪ್ಪು ಸಿಲೆಟ್ ಚಂದ್ರೋದಯಕ್ಕೆ ಪೂರ್ವಭಾವಿಯಾಗಿ ಬೆಳ್ಳಿಯ ಅಂಚನ್ನು ಪಡೆದಿತ್ತು. ಕತ್ತಲಿನಲ್ಲಿ ನದಿ ಕಾಣಿಸದಿದ್ದರೂ, ಕಾವೇರಿಯ ಜುಳು ಜುಳು, ಜೋಗುಳದಂತೆ ಇಂಪಾಗಿತ್ತು. ಬಹು ಹಳೆಯ ಮಿತ್ರರೊಂದಿಗೆ ಕುಳಿತು ಹರಟುವ ಸಂತಸ ಮನವನ್ನು ತುಂಬಿತ್ತು.

''ನಿಮ್ಮೆಲ್ಲರ ಮಾತುಕತೆ ನನ್ನಲ್ಲಿ ತಪ್ಪೆಸಗಿದ ಭಾವನೆ ಮೂಡಿಸಬೇ. ಆದರೆ ಹಾಗೇನೂ ಆಗಿಲ್ಲ ಎಂದು ನಮ್ರತೆಯಿಂದ ತಿಳಿಸಬಯಸುವೆ. ನನ್ನ ತಾಯ್ನಾಡು ನನ್ನನ್ನು ಬಹು ಚೆನ್ನಾಗಿ ಕಾಪಾಡಿಕೊಂಡು ಬಂದಿದೆ. ಮಧ್ಯಮ ವರ್ಗ ಕುಟುಂಬದಿಂದ ಬಂದ ನನಗೆ, ಆ ಕಾಲಕ್ಕೆ ಗಗನ ಕುಸುಮವಾಗಿದ್ದ ವಿದೇಶ ಯಾತ್ರೆಯನ್ನು ಸರ್ಕಾರ ನಡೆಸಿಕೊಟ್ಟಿತು. ಆ ಋಣವನ್ನು ಇಪ್ಪತ್ತೈದು ವರ್ಷಗಳ ಕಾಲ ಉದ್ಯಮ ನಡೆಸಿ ಹಳ್ಳಿಯ ಹುಡುಗರಿಗೆ ತರಬೇತಿ ನೀಡಿ ಬಹುಮಟ್ಟಿಗೆ ತೀರಿಸಿರುವೆ. ಕಳೆದ ಹದಿನೇಳು ವರ್ಷಗಳಿಂದ ನನ್ನ ಕೈಲಾದ ಮಟ್ಟಿಗೆ ಸಾಹಿತ್ಯ ಕೃಷಿ ನಡೆಸಿ ಹಲವರಿಗಾದರೂ ಮುದ ನೀಡಿರುವ ಭ್ರಮೆ ನನ್ನದು. ನಾನೇನು ಗಾಂಧಿ, ಕ್ರಾಂವೆಲ್ ಅಲ್ಲ. ಆದರೆ ಪ್ರತಿ ವರ್ಷ ತೆರಿಗೆ ಕೊಟ್ಟಿದ್ದೇನೆ. ಆ ತೆರಿಗೆಯನ್ನು ಬಳಸುವ ಜವಾಬ್ದಾರಿ ಸರಕಾರದ್ದು. ಸರಕಾರವನ್ನು ಆಯ್ಕೆ ಮಾಡುವ

ಪ್ರಕ್ರಿಯೆಯಲ್ಲಿ ನಾನು ಭಾಗವಹಿಸುತ್ತಿದ್ದೇನೆ. ರೋಜರ್ ಹೇಳಿದ ಹಾಗೆ ನಮ್ಮ ಪ್ರಾರಂಭಿಕ ಆರ್ಥಿಕ ತಳಹದಿ ಕಿರಿದಾಗಿತ್ತು. ಈಗ ಪ್ರಜಾಪ್ರಭುತ್ವದ ಆನೆಯ ನಡಿಗೆ ಸಾಗಿದೆ. ಚೈನಾ ನಮಗಿಂತ ಒಂಭತ್ತು ಪಟ್ಟು ಮುಂದಿದೆಯಂತೆ. ಇರಲಿ. ಆ ಸರ್ವಾಧಿಕಾರದ ಸಾಗಾಲೋಟ ನಮಗೆ ಒಗ್ಗಲಾರದು. ನಾನೇನು ನಮ್ಮ ರಾಜಕಾರಣಿಗಳ ಭಕ್ತನಲ್ಲ. ಆದರೆ ಅವರ ರಾಜಕೀಯ ಸ್ವಾತಂತ್ರ್ಯ ನನಗೆ ಬಹು ಪ್ರಿಯವಾದ ಸರಕು....'' ಎಂದು ಉದ್ದ ಭಾಷಣ ಬಿಗಿದೆ. ಬೀರು ಕುಡಿದ ಬಾಯಿ ಸುಮ್ಮನಿರುತ್ತದೆಯೇ.

ರಾತ್ರಿ ಬಹು ಹೊತ್ತು ಮಾತನಾಡುತ್ತಿದ್ದೆವು. ಮಾತು ನಿಲ್ಲಿಸಲು ಯಾರಿಗೂ ಮನಸ್ಸು ಬಾರದು. ಕೊನೆಗೆ, ರೋಜರ್ ''ನಾಳೆ ಬೆಳಿಗ್ಗೆ ಬೇಗನೆ ಮೀನು ಹಿಡಿಯಲು ಹೋಗಬೇಕು'' ಎನ್ನುತ್ತಾ ನಮಗೆ ವಿದಾಯ ಹೇಳಿದ. ಅವನ ಹಿಂದೆ ಅಲನ್ ಹೊರಟ. ಪೀಟರ್ ''ನಾನು ನದಿ ಹರಿಯುವುದನ್ನು ನೋಡಿಬರುತ್ತೇನೆ. ಕುಮರ್ ನಿನಗೆ ತೊಂದರೆಯಾಗದಿದ್ದರೆ ಬಾರ್ಬರಾಳನ್ನು ಲಾಗ್ ಹಟ್‌ವರೆಗೂ ಬಿಟ್ಟು ಹೋಗಲಾಗುತ್ತದೆಯೇ'' ಎಂದು ಕೇಳಿ ನನ್ನ ಸಮ್ಮತಿ ಪಡೆದು ನದಿಯ ಬಳಿ ಸಾಗಿದ. ನಾನು ಬಾರ್ಬರಾ ಜೊತೆ ನಡೆಯುತ್ತಾ ''ನನ್ನ ಉತ್ತರ ಹೇಗಿತ್ತು?'' ಅಂತ ಕೇಳಿದೆ. ಪ್ರಶ್ನೆ ಔಪಚಾರಿಕ ಅಂತ ನನಗೆ ತಿಳಿದಿತ್ತು. ಯಾರು ತಾನೆ ''ಚೆನ್ನಾಗಿರಲಿಲ್ಲ'' ಅಂತ ಮುಖಕ್ಕೆ ಹೊಡೆದ ಹಾಗೆ ಹೇಳುತ್ತಾರೆ!

ನನ್ನ ಪ್ರಶ್ನೆಗೆ ಬಾರ್ಬರಾ ನೇರ ಉತ್ತರ ನೀಡಲಿಲ್ಲ. ಬದಲಿಗೆ ನನಗೆ ಮರು ಪ್ರಶ್ನೆ ಹಾಕಿದಳು.

''ನಿಮ್ಮ ರಾಜ್ಯದ ಪೂರ್ವಕ್ಕೆ ನಕ್ಸಲೈಟ್ ಚಟುವಟಿಕೆ ನಡೆಯುತ್ತಿದೆ ಎಂದು ಪೇಪರಿನಲ್ಲಿ ಓದಿದ್ದೆ. ನಿಜವೇನು?''

''ಹೌದು, ನಿಜ. ಯಾಕೆ?''

''ನೀನು ಕೈಗಾರಿಕೋದ್ಯಮಿಯಾಗಿ ದೇಶಸೇವೆ ಮಾಡುವ ಬದಲು ಅಂತಹದೊಂದು ಕ್ರಾಂತಿಯಲ್ಲಿ ತೊಡಗಿಸಿಕೊಂಡಿದ್ದರೆ ನಿನ್ನ ಜೀವನಕ್ಕೆ ಒಂದು ಅರ್ಥ ಇರುತ್ತಿತ್ತು ಅನ್ನಿಸುತ್ತದೆ. Good night kumar'' ಎಂದು ಬಾರ್ಬರಾ ಒಳನಡೆದಳು. ಈ ಸಮಾಜವಾದಿಗಳ ಜಾಯಮಾನವೇ ಹೀಗೆ. ಒಂದು ಚೂರೂ ಸಂವೇದನೆ ಇರೋದಿಲ್ಲ ಅಂದುಕೊಳ್ಳುತ್ತಾ ನಾನು ನನ್ನ ಅವಲಕ್ಷಣದ ಕೈಯನ್ನು ನೋಡಿಕೊಂಡೆ.

– ಶಿವಕುಮಾರ್

ಗುರು ವಂದನೆ

– ಕು. ಗೋ.

"ಹೆರ್ಗ ವಿಠಲ ಶೆಟ್ಟಿ" ಅವರ ಹೆಸರು ಹೊತ್ತು ಒಂದು ಶಾಲೆ ಉದ್ಘಾಟನೆಯಾದ ಸುದ್ದಿಯೊಂದನ್ನು ಪತ್ರಿಕೆಯಲ್ಲಿ ನೋಡಿದೆ. ನೆನಪು ಹಿಂದೆ ಹಿಂದೆ ಬಹಳ ಹಿಂದಕ್ಕೆ ಹೋಯಿತು. ಹೆರ್ಗ ವಿಠಲ ಶೆಟ್ಟರು ಹೆರ್ಗ ಶಾಲೆಯಲ್ಲಿ ನನಗೆ ಅ ಆ ಇ ಈ ಹೇಳಿಕೊಟ್ಟವರು. ಒಂದರಿಂದ ಐದನೇ ತರಗತಿಯವರೆಗೆ ಇದ್ದ ಆ ಶಾಲೆಗೆ ಹೆರ್ಗ ವಿಠಲ ಶೆಟ್ಟರು ಹೆಡ್ಮಾಸ್ತರರು. ನಮಗೆ ಒಂದನೇ ಕ್ಲಾಸಿಗೆ ಅವರು ಪಾಠ ಮಾಡುತ್ತಿದ್ದರು. ನಾವು ಐದನೇ ಕ್ಲಾಸಿಗೆ ಹೋದಾಗಲೂ ಅವರೇ ನಮಗೆ ಮಾಸ್ತರರಾಗಿದ್ದರು. ಯಾವ ವಿದ್ಯಾರ್ಥಿಯೂ ಎಂದೆಂದೂ ಮರೆಯಲಾರದ ಮಹಾನುಭಾವ ಎಷ್ಟು ಚಂದವಾಗಿ ಪಾಠ ಹೇಳಿಕೊಡುತ್ತಿದ್ದರು ಎಂದರೆ ಮನೆಗೆ ಹೋಗಿ ಪುನಃ ಪಾಠ ಕಲಿಯುವ ಪ್ರಮೇಯವೇ ಇರುತ್ತಿರಲಿಲ್ಲ. ಶಾಲಾ ಕಾಲೇಜುಗಳಲ್ಲಿ ನನಗೆ ಸಿಕ್ಕಿದ ಉಪಾಧ್ಯಾಯರು, ಪ್ರಾಧ್ಯಾಪಕರಲ್ಲಿ ಕೆಲವೇ ಕೆಲವರು ನನ್ನ ನೆನಪಿನಲ್ಲಿ ಉಳಿದಿದ್ದಾರೆ. ತಮ್ಮ ಪ್ರಭಾವವನ್ನು ತಕ್ಕ ಮಟ್ಟಿಗೆ ಬೀರಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ನನ್ನ ಮೊದಲ ಮತ್ತು ಕೊನೆಯ ಗುರುಗಳಾಗಿದ್ದ ಶ್ರೀ ವಿಠಲ ಶೆಟ್ಟರಲ್ಲಿ ಒಂದು ಪೂಜ್ಯ ಭಾವನೆಯನ್ನು ನಾನು ಸದಾ ಇರಿಸಿಕೊಂಡಿದ್ದೇನೆ. ಅವರು ಸತ್ತು ಯಾವ ಸ್ವರ್ಗದಲ್ಲಿದ್ದಾರೋ! ಅವರ ಆ ಭವ್ಯ ವ್ಯಕ್ತಿತ್ವ ಮಾತ್ರ ಸದಾ ಕಣ್ಣೆದಿರು ನಿಂತಂತಿರುತ್ತದೆ. ಶುಭ್ರ ಬಿಳಿ ಉಡುಗೆ ತೊಡುಗೆ, ಗಂಭೀರ ಮುಖಮುದ್ರೆ, ಯಾವ ದುರಭ್ಯಾಸವೂ ಇರದ ಶುದ್ಧ ವ್ಯಕ್ತಿ. ನಾನು ಶಾಲೆ ಬಿಟ್ಟ ಮೇಲೆ ಅವರನ್ನು ಒಮ್ಮೆ ಮಾತ್ರ ನೋಡಿರಬೇಕು. ಕೆಮ್ತೂರಿನವರಾದ ಅವರು ಹೆರ್ಗದವರೇ ಆಗಿ ಹೋಗಿದ್ದರು.

ನಮ್ಮ ಅದೇ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದು ನನ್ನ ನೆನಪಿನಲ್ಲಿ ಉಳಿದವರು ಹಾವಂಜೆಯ ಸಂಕಯ್ಯ ಶೆಟ್ಟರು, ಹೆರ್ಗದ ಹಿರಿಯಣ್ಣ ಶೆಟ್ಟರು ಹಾಗೂ ಉಪ್ಪೂರಿನ ಇನ್ನೊಬ್ಬ ಮಾಸ್ತರರು. ಅವರ ಹೆಸರು ಯಾಕೋ ಜ್ಞಾಪಕಕ್ಕೆ ಬರುತ್ತಿಲ್ಲ. ಅವರಿಗೆ ಊಟವಾದ ಮೇಲೆ ಒಂದು ಲೋಟ ಹಾಲು ಕುಡಿಯುವ ಅಭ್ಯಾಸವಿತ್ತು. ನಮ್ಮ ಮನೆಯಿಂದ ಕಾಯಿಸಿದ ಒಂದು ಕುಡ್ತೆ ಹಾಲು ತಂದು ಕೊಡುತ್ತಿದ್ದೆ. ದುಡ್ಡು ಕೂಡಾ ಕೊಡುತ್ತಿದ್ದರು. ಒಂದು ತಿಂಗಳು ಹಾಲಿನ ದುಡ್ಡು ಕೊಡಲು ಅವರು ಮರೆತಿದ್ದರು. ನಾನು ಕೂಡಾ ದಾಕ್ಷಿಣ್ಯದಿಂದ ಕೇಳಲೂ ಇಲ್ಲ. ಸಂಕಯ್ಯ ಶೆಟ್ಟರು ಶುದ್ಧ ಗಾಂಧಿವಾದಿ. ತಲೆಗೆ ಗಾಂಧೀ ಟೋಪಿ, ಖಾದಿ ಜುಬ್ಬಾ, ಖಾದಿ ಪಂಚೆ, ಕಾಲಿಗೆ ಚಪ್ಪಲಿ, ಕಣ್ಣಿಗೆ ಕನ್ನಡಕ ಹಾಕುತ್ತಿದ್ದರು. ಪಾಠ ಚೆನ್ನಾಗಿ

ಮಾಡುತ್ತಿದ್ದರು. ಅವರ ಮಗ ನನ್ನ ಸಹೋದ್ಯೋಗಿಯಾಗಿದ್ದರು. ಅವರನ್ನು ನೋಡಿದಾಗ ಗುರು ಪುತ್ರೋಭ್ಯೋ ನಮಃ ಎನ್ನುತ್ತಿದ್ದೆ. ಹಿರಿಯಣ್ಣ ಶೆಟ್ಟರೂ ನಮ್ಮೂರಿನ ಭವ್ಯ ವ್ಯಕ್ತಿ. ಮೋನಪ್ಪ ಶೆಟ್ಟರ ಮಗ. ಮೋನಪ್ಪ ಶೆಟ್ಟರು ಥೇಟ್ ಡಿ.ಐ.ಜಿ.ಯ ಹಾಗೇ ಕಾಣುತ್ತಿದ್ದರು. ದಂಟೆ ಊರಿಕೊಂಡು ನಮ್ಮ ಮನೆಗೆ ಬರುತ್ತಿದ್ದರು, ಅಮ್ಮ ಕೊಡುತ್ತಿದ್ದ ಹಪ್ಪಳವನ್ನು ಪುಡಿ ಮಾಡಿ ತಿನ್ನುತ್ತಿದ್ದರು. ಚಾ ಕುಡಿಯುತ್ತಿದ್ದರು, ಅಜ್ಜಿ ಕುಟ್ಟಿ ಕೊಡುತ್ತಿದ್ದ ವೀಳ್ಯದೆಲೆ ಹೊಗೆಸೊಪ್ಪಿನ ಮುದ್ದೆಯನ್ನು ಬಾಯಲ್ಲಿಟ್ಟುಕೊಳ್ಳುತ್ತಿದ್ದರು. ಚೆನ್ನಾಗಿ ಮಾತನಾಡಿ ಹೋಗುತ್ತಿದ್ದರು. ಹಿರಿಯಣ್ಣ ಶೆಟ್ಟರು ಭರ್ಜರಿ ಆಳು. ಅವರಿಗೆ ಮಕ್ಕಳಿರಲಿಲ್ಲ. ಬೀಡಿ ಸೇದುತ್ತಿದ್ದರು, ಮಧ್ಯಾಹ್ನ ಕ್ಲಾಸಿನಲ್ಲೇ ಸಣ್ಣ ನಿದ್ರೆ ಮಾಡುತ್ತಿದ್ದರು. ಮಕ್ಕಳಿಗೆ ಬೆತ್ತದ ರುಚಿ ಕೂಡಾ ತೋರಿಸುತ್ತಿದ್ದರು. ಅವರಲ್ಲಿ ಭಕ್ತಿಗಿಂತ ಹೆಚ್ಚಾಗಿ ಭಯ ಮೂಡುತ್ತಿತ್ತು. ಆದರೆ ಅವರು ಯಾವ ಮಕ್ಕಳಿಗೂ ಕೆಡುಕು ಮಾಡಿರಲಿಲ್ಲ. ಒಳ್ಳೆಯ ಭಜನೆ ಹಾಡುತ್ತಿದ್ದರು, ಹಾರ್ಮೋನಿಯಂ ಬಾರಿಸುತ್ತಿದ್ದರು. ನಾಟಕ ನಿರ್ದೇಶನ ಮಾಡುತ್ತಿದ್ದರು. ಈ ಎಲ್ಲ ಮಾಸ್ತರರೂ ಈಗ ಇಲ್ಲ. ಅವರ ನೆನಪು ಮಾತ್ರ ಇದೆ.

ಮಣಿಪಾಲದಲ್ಲಿ ಒಂದು ವರ್ಷ ಆರನೇ ಕ್ಲಾಸಿನ ವಿದ್ಯಾರ್ಥಿಯಾಗಿದ್ದೆ. ಅಲ್ಲಿ ಬಂಗ್ಲೆ ಸುಬ್ಬಣ್ಣಾಚಾರ್ರು ಅಂತ ಒಬ್ಬರು ಮಾಸ್ತರರು ಇದ್ದರು. ಬಹಳ ತಮಾಷೆಯ ವ್ಯಕ್ತಿ, ಸ್ವಲ್ಪ ಮುಂಗೋಪಿಯೂ ಆಗಿದ್ದರು. ಬಹಳ ಚೆನ್ನಾಗಿ ಪಾಠ ಮಾಡುತ್ತಿದ್ದರು. ಗಣಿತದಲ್ಲಿ ತುಂಬ ಆಸಕ್ತಿ ಹುಟ್ಟಿಸುತ್ತಿದ್ದರು. ಪಂಚೆ ಶರ್ಟ್ ಅದರ ಮೇಲೊಂದು ಕರಿಕೋಟು ಧರಿಸಿ ಶಾಲೆಗೆ ಬರುತ್ತಿದ್ದರು. ಬೆಳ್ಳಗೆ ತೆಳ್ಳಗಿನ ವ್ಯಕ್ತಿ. ಮಧ್ಯಾಹ್ನ ಸ್ವಲ್ಪ ಮಲಗುವ ಅಭ್ಯಾಸವಿತ್ತು. ಇನ್ನೊಂದು ಶಾಲೆಯ ಮಾಸ್ತರರೊಟ್ಟಿಗೆ ಮಧ್ಯಾಹ್ನದ ಊಟಕ್ಕೆ ಒಂದು ಮನೆಗೆ ಹೋಗುತ್ತಿದ್ದರು. ಆ ಸಮಯ ಅವರನ್ನು ಎಬ್ಬಿಸಿ ಕಳಿಸುವ ಕೆಲಸ ನನ್ನದಾಗಿತ್ತು. ಕೇವಲ ಒಂದೇ ವರ್ಷ ಅವರು ನನ್ನ ಉಪಾಧ್ಯಾಯರಾಗಿದ್ದರು. ಅನಂತರ ಅವರನ್ನು ನಾನು ನೋಡಿಯೇ ಇಲ್ಲ. ಬೆಂಗಳೂರಿನಲ್ಲಿ ಮಕ್ಕಳೊಟ್ಟಿಗೆ ಇದ್ದಾರೆಂದು ಕೇಳಿದ್ದೇನೆ. ನೂರಕ್ಕೆ ಹತ್ತಿರವಾಗಿರಬಹುದು ಅವರ ಈಗಿನ ವಯಸ್ಸು. ಆ ಶಾಲೆಯ ಬೇರೆ ಉಪಾಧ್ಯಾಯರ ನೆನಪು ಯಾಕೋ ಆಗುತ್ತಿಲ್ಲ. ಅನಂತರ ನಾನು ಮೈಸೂರು ಜಿಲ್ಲೆಯ ಪಿರಿಯಾ಼ ಪಟ್ಟಣದ ಮಾಧ್ಯಮಿಕ ಶಾಲೆಗೆ ಸೇರಿದೆ. ಕೆಲವು ಶಾಲಾ ನಿಯಮಗಳನ್ನು ಪಾಲಿಸಲಾಗದೆ ಅಲ್ಲೂ ಆರನೇ ತರಗತಿಗೆ ಸೇರಬೇಕಾಯಿತು. ಅಲ್ಲಿಯ ಮುಖ್ಯೋಪಾಧ್ಯಾಯರು ಬಹಳ ಸಾತ್ವಿಕ ಮನುಷ್ಯ, ಕಚ್ಚೆ ಪಂಚೆ, ಅಂಗಿ, ಕೋಟು, ತಲೆಗೊಂದು ಪೇಟಾ ಇರುತ್ತಿತ್ತು. ಕಾಲಿಗೆ ಕೆಂಪು ಬೂಟ್ಸ್ ಹಾಕುತ್ತಿದ್ದರು. ಅವರ ಹೆಸರು ಮರೆತು ಹೋಗಿದೆ. ಆ ಶಾಲೆಯಲ್ಲಿ ಕನ್ನಡ

ಪಂಡಿತರೊಬ್ಬರು ನನ್ನ ಮೇಲೆ ತುಂಬ ಪ್ರಭಾವ ಬೀರಿದ್ದರು. ಬಹಳ ಚೆನ್ನಾಗಿ ಪಾಠ ಮಾಡುತ್ತಿದ್ದರು. ಆಗಲೇ ವಯಸ್ಸಾದವರ ಹಾಗೆ ಕಾಣುತ್ತಿದ್ದರು. ಇನ್ನೊಬ್ಬರು ಸಪೂರದ ಗಣಿತ ಮಾಸ್ತರರಿದ್ದರು. ಪ್ರತಿ ಪರೀಕ್ಷೆಯಲ್ಲೂ ನನಗೆ ನೂರಕ್ಕೆ ನೂರು ಮಾರ್ಕು ಕೊಡುತ್ತಿದ್ದರು. ಅಲ್ಲಿಯ ನನ್ನ ಸಹಪಾಠಿಗಳೆಲ್ಲ ತೀರ ಬಡವರಾಗಿ, ಕೊಳಕರಾಗಿ ಕಾಣುತ್ತಿದ್ದರು. ಒಂದೇ ವರ್ಷದಲ್ಲಿ ನಾನು ಆ ಊರನ್ನು ಬಿಡಬೇಕಾಯಿತು. ಆರನೇ ತರಗತಿಯಲ್ಲಿ ತೇರ್ಗಡೆಯಾಗಿ ಏಳನೇ ತರಗತಿಗೆ ಹುಣಸೂರಿನ ಶಾಲೆಗೆ ಸೇರಬೇಕಾಯಿತು.

ಹುಣಸೂರಿನ ನನ್ನ ಐದು ವರ್ಷದ ಜೀವನ ನಿಜವಾಗಿಯೂ ಒಂದು ಜೀವನದಂತೆಯೇ ತಿಳಿದಿದ್ದೇನೆ. ನನ್ನ ಭಾವನ ಹೋಟೆಲಿನಲ್ಲಿದ್ದೆ. ಅವರ ಮಗನಂತೆಯೇ ನೋಡಿಕೊಂಡಿದ್ದರು. ಶಾಲೆಗೆ ಹೋಗುವಾಗ ಮಾತ್ರ ನಾನು ವಿದ್ಯಾರ್ಥಿ. ಬಾಕಿ ಸಮಯ ಹೋಟೆಲ್ ಮಾಣಿ. ಒಳ್ಳೆಯ ಉತ್ಸಾಹವಿತ್ತು. ಚುರುಕುತನವಿತ್ತು, ಓದು ಬಿರುಸಾಗಿತ್ತು, ಕೆಲಸದಲ್ಲಿ ಅದಮ್ಯ ಉತ್ಸಾಹವಿತ್ತು. ಮಾಧ್ಯಮಿಕ ಶಾಲೆಯ ಏಳು, ಎಂಟು ತರಗತಿಗಳನ್ನು ಅಲ್ಲೇ ಮುಗಿಸಿದ್ದು ಎಂಟನೇ ಕ್ಲಾಸಿಗೆ ಪಬ್ಲಿಕ್ ಪರೀಕ್ಷೆ ಇತ್ತು. ಅಲ್ಲಿ ಶಾಲೆಗೆ ಸೇರಿದ ಒಂದೆರಡು ತಿಂಗಳಲ್ಲಿ ಮನೆ ಪಾಠಕ್ಕೆ ಬರಲು ಒಬ್ಬರು ಉಪಾಧ್ಯಾಯರು ಕೇಳಿದರು. ಮನೆ ಪಾಠ ಒಂದು ಫ್ಯಾಶನ್ ಆಗಿತ್ತು. ಆದರೆ ನನಗೆ ಶಾಲೆಯ ಪಾಠವೇ ಸಾಕಾಗಿತ್ತು. ಮನೆ ಪಾಠಕ್ಕೆ ಸೇರಲು ಇಷ್ಟ ಪಡಲಿಲ್ಲ. ಆ ಮಾಸ್ತ್ರು ಗಣಿತ, ವಿಜ್ಞಾನದ ಪಾಠ ಮಾಡುತ್ತಿದ್ದರು. ಪ್ಯಾಂಟ್ ಹಾಕುತ್ತಿದ್ದ ಮಾಸ್ತ್ರು ಅವರೊಬ್ಬರೇ ಆಗಿದ್ದರು. ಸಣ್ಣ ಪ್ರಾಯದವರು. ಇಲ್ಲೂ ಒಬ್ಬ ಕನ್ನಡ ಪಂಡಿತರು ಮೈಸೂರು ಪೇಟಾ ಧರಿಸಿ ಬರುತ್ತಿದ್ದರು. ಸ್ವಲ್ಪ ಸಿಡುಕು ಸ್ವಭಾವದವರು. ಕೈಯಲ್ಲಿ ಸದಾ ಬೆತ್ತವಿರುತ್ತಿತ್ತು. ಶಾಲೆಯ ಹೆಡ್ಮಾಸ್ತರರು ಒಬ್ಬ ಭರ್ಜರಿ ಮನುಷ್ಯ. ವಯಸ್ಸು ಐವತ್ತರ ಮೇಲಾಗಿದ್ದಿರಬಹುದು ತಲೆಗೊಂದು ಕರೀ ಟೋಪಿ ಧರಿಸುತ್ತಿದ್ದರು, ಹಣೆಯ ಮೇಲೊಂದು ಕಪ್ಪು ಉದ್ದ ನಾಮ, ಬಹಳ ಚೆನ್ನಾಗಿ ಪಾಠ ಮಾಡುತ್ತಿದ್ದರು. ಪರೀಕ್ಷೆಯ ಸಮಯ ಮನೆ ಪಾಠ ಕೂಡಾ ಮಾಡುತ್ತಿದ್ದರು. ಕೆಲವು ಮಕ್ಕಳಿಂದ ಫೀಸ್ ಕೂಡಾ ತೆಗೆದುಕೊಳ್ಳುತ್ತಿರಲಿಲ್ಲ. ನಾನೊಬ್ಬ ಪ್ರತಿಭಾವಂತ ವಿದ್ಯಾರ್ಥಿ ಎಂದು ತಿಳಿದಿದ್ದರು. ನನಗೆ ಅನುಕೂಲವಾಗಲೆಂದು ಪಬ್ಲಿಕ್ ಪರೀಕ್ಷೆಗೆ ಎಂಟು ದಿನದ ಮೊದಲು ನನ್ನನ್ನು ಮನೆಗೆ ಕರೆದು ಪಾಠ ಹೇಳಿದ್ದಾರೆ. ಆ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಆ ಶಾಲೆಗೆ ಪ್ರಥಮವಾಗಿ ಪಾಸಾಗಿದ್ದೆ. ಯಾಕೋ ಆ ಯಾವ ಉಪಾಧ್ಯಾಯರ ಹೆಸರೂ ನೆನಪಾಗುತ್ತಿಲ್ಲ. ಆದರೆ ಅವರೆಲ್ಲರ ಚಿತ್ರ ಕಣ್ಣ ಮುಂದೆ ನಿಲ್ಲುತ್ತದೆ.

ಎಂಟನೇ ಕ್ಲಾಸ್ ಅಂದರೆ ಲೋಯರ್ ಸೆಕೆಂಡರಿ ಪರೀಕ್ಷೆ ಪಾಸಾದ ಮೇಲೆ ನನಗೆ ವಿದ್ಯಾಭ್ಯಾಸ ಮುಂದುವರಿಸುವ ಆಲೋಚನೆ ಇರಲಿಲ್ಲ. ಹೋಟೆಲಲ್ಲೇ ಕೆಲಸ ಮಾಡಿಕೊಂಡು ನಾಲ್ಕು ಕಾಸು ಸಂಪಾದನೆ ಮಾಡುವ ಆಲೋಚನೆ ಇತ್ತು. ಈ ಸಂದರ್ಭದಲ್ಲಿ ನನ್ನನ್ನು ಸರಿದಾರಿಗೆ ತಂದವರು ಪಿರಿಯಾ ಪಟ್ಟಣದಲ್ಲಿದ್ದ ಡಾಕ್ಟರ್ ನಾರಾಯಣ ಉಡುಪರು. ಅಲ್ಲಿದ್ದಾಗ ಸ್ವಲ್ಪ ಸಮಯ ನಾನು ಅವರ ಮನೆಯಲ್ಲೂ ಇದ್ದೆ. ನಾನು ಶಾಲೆಗೆ ಹೋಗಲು ಕೇಳುತ್ತಿಲ್ಲವೆಂದು ನನ್ನ ಭಾವ ಅದರಲ್ಲಿ ದೂರಿಕೊಂಡರು. ಅವರು ಹುಣಸೂರಿಗೆ ನಮ್ಮ ಮನೆಗೆ ಬಂದು ಗಂಟೆ ಗಟ್ಟಲೆ ಉಪದೇಶ ಮಾಡಿದರು. ಅಲ್ಲದೆ ಹುಣಸೂರು ಶಾಲೆಯ ನನ್ನ ಉಪಾಧ್ಯಾಯರೆಲ್ಲ ಬಂದು ನಾನು ವಿದ್ಯಾಭ್ಯಾಸ ಮುಂದುವರಿಸಲೇಬೇಕೆಂದು ಪಟ ಹಿಡಿದರು. ಇವರೆಲ್ಲರ ಒತ್ತಾಯಕ್ಕೆ ಮಣಿದ ನಾನು ಹೈಸ್ಕೂಲ್ ಸೇರಲು ಒಪ್ಪಿಕೊಂಡೆ. ಆ ಸಂದರ್ಭದಲ್ಲಿ ಅವರೆಲ್ಲ ನನ್ನನ್ನು ಪ್ರಚೋದಿಸದಿದ್ದರೆ ನಾನು ಏನಾಗುತ್ತಿದ್ದೆನೋ! ನಾನು ಆ ಮಹನೀಯರನ್ನು ಎಂದೂ ಮರೆಯಲಿಲ್ಲ.

ಹೈಸ್ಕೂಲಿನಲ್ಲಿ ಕನ್ನಡ ಮೀಡಿಯಂಗೆ ಸೇರಲು ನಾನು ಬಯಸಿದೆನಾದರೂ ನಮ್ಮ ಉಪಾಧ್ಯಾಯರು ಇಂಗ್ಲಿಷ್ ಮೀಡಿಯಂಗೆ ಸೇರಿಸಿದರು. ಅವರ ದೃಷ್ಟಿಯಲ್ಲಿ ನಾನೊಬ್ಬ ಪ್ರತಿಭಾವಂತ ವಿದ್ಯಾರ್ಥಿಯೇ ಆಗಿದ್ದೆ. ಮೂರು ವರ್ಷವೂ ಚಡ್ಡಿ ಅಂಗಿಯಲ್ಲೇ ಇದ್ದೆ, ಚಪ್ಪಲಿ ಇಲ್ಲದೆಯೇ ಇದ್ದೆ, ಯಾವ ಹಮ್ಮು ಬಿಮ್ಮು ಇಲ್ಲದೆಯೇ ಇದ್ದೆ. ನನಗೆ ಒಳ್ಳೆಯ ಉಪಾಧ್ಯಾಯರೇ ಸಿಕ್ಕಿದ್ದರು. ಅವರಲ್ಲಿ ನನಗೆ ತುಂಬ ಇಷ್ಟವಾದವರು ಬಿ.ಎನ್. ಸುಬ್ಬಯ್ಯ ಎಂಬವರು. ಬಿ.ಎನ್.ಎಸ್. ಎಂದೇ ಅವರನ್ನು ಕರೆಯುತ್ತಿದ್ದೆವು. ಆರಡಿ ಮನುಷ್ಯ, ನೆಟ್ಟಗೆ ಇದ್ದರು. ಪ್ಯಾಂಟ್ ಕೋಟು ಹಾಕುತ್ತಿದ್ದರು. ಮೂರು ವರ್ಷವೂ ಗಣಿತದ ಪಾಠ ಹೇಳಿಕೊಡುತ್ತಿದ್ದರು. ಅಂಥ ಮಾಸ್ತರರು ತುಂಬ ಜನ ಇರಲಿಕ್ಕಿಲ್ಲ. ಶಾಲೆಯ ಯಾವ ಪಾಠವನ್ನೂ ಮನೆಯಲ್ಲಿ ಅಭ್ಯಾಸ ಮಾಡಬೇಕೆಂದೇ ಇರಲಿಲ್ಲ. ಪಾಠದ ಸಮಯವೇ ಎಲ್ಲವೂ ಅರ್ಥವಾಗುವಂತೆ ವಿವರಿಸುತ್ತಿದ್ದರು. ಇನ್ನೊಬ್ಬರು ಬಿ. ರಾಮಕೃಷ್ಣ ಅಂತ ಇರಬೇಕು. ಸಿನಿಮಾ ಹೀರೋ ತರಹ ಇದ್ದರು. ಅವರು ಕೂಡಾ ಲೆಕ್ಕಕ್ಕೆ ಮಾಸ್ತರರು. ಅದೇ ಶಾಲೆಯಲ್ಲಿದ್ದ ಒಬ್ಬ ಟೀಚರನ್ನು ಲವ್ ಮಾಡಿ ಮದುವೆಯಾದರು. ಈ ಬಿ.ಎನ್.ಎಸ್.ಬಿ.ಆರ್.ಕೆ. ಗಳ ಲೆಕ್ಕದ ಪಾಠ ನನಗೆ ಪಬ್ಲಿಕ್ ಪರೀಕ್ಷೆಯಲ್ಲಿ ನೂರಕ್ಕೆ ತೊಂಭತ್ತೆಂಟು ಮಾರ್ಕು ತೆಗೆದುಕೊಳ್ಳಲು ಸಹಾಯ ಮಾಡಿತು. ಇನ್ನೊಬ್ಬ ಮಾಸ್ಟ್ರು ಇಂಗ್ಲಿಷ್ ಪಾಠಕ್ಕೆ ಬರುತ್ತಿದ್ದರು. ಅವರು ಶಾಲೆಗೆ ರಾಜೀನಾಮೆ ಕೊಟ್ಟು ಬಸ್ ಓಡಿಸಲು ಶುರುಮಾಡಿದರು. ಸೈನ್ಸ್ ಟೀಚರ್ ಹೆಸರು ಮರೆತು ಹೋಗಿದೆ. ಚರಿತ್ರೆ ಭೂಗೋಳದ ಉಪಾಧ್ಯಾಯರ ಹೆಸರುಗಳೂ ನೆನಪಿಗೆ ಬರುತ್ತಿಲ್ಲ. ಆದರೆ ಅವರೆಲ್ಲ ಉತ್ತಮ

ಉಪಾಧ್ಯಾಯರಾಗಿದ್ದರು. ಲಕ್ಷ್ಮೀ ಕುಮಾರ ತಾತಾಚಾರ್ಯರ ಕನ್ನಡ ತರಗತಿಗಳನ್ನು ಎಂದೂ ಮರೆಯಲಾರೆ. ಅವರ ಪಾಠ ಇಂದೂ ನನಗೆ ಕೇಳಿಸುತ್ತಿದೆ, ಬಹುಶಃ ಆಮೇಲೆ ಅಂಥ ಕನ್ನಡ ಪಂಡಿತರು ನನಗೆ ಸಿಕ್ಕಲಿಲ್ಲ. ಇನ್ನೊಬ್ಬ ಉಪಾಧ್ಯಾಯರು ವರದ ದೇಶಿಕಾಚಾರ್ ಎಂಬವರು ಎಂದೆಂದೂ ಮರೆಯದಂತಹ ವ್ಯಕ್ತಿತ್ವ ಅವರದು. ಹಣೆಯ ಮೇಲೆ ಮೂರು ನಾಮ, ಕಚ್ಚೆ ಪಂಚೆ, ತೋಳು ಮುಚ್ಚುವ ಅಂಗಿ, ಅವರು ಸ್ಪೀಡ್ ಆಗಿ ನಡೆಯುವಾಗ ಎರಡೂ ಕೈಗಳನ್ನು ಒಟ್ಟಿಗೆ ಹಿಂದೆ ಮುಂದೆ ಬೀಸುತ್ತಿದ್ದರು. ಇಂಗ್ಲಿಷ್, ಹಿಂದಿ, ಕ್ಲಾಸುಗಳಿಗೆ ಬರುತ್ತಿದ್ದರು. ಅವರ ಇಂಗ್ಲಿಷ್ ಅಂದರೆ ಇಂಗ್ಲಿಷೇ ಎಂಥ ದಡ್ಡನೂ ಅವರ ಪಾಠ ಕೇಳಿದರೆ ಬುದ್ಧಿವಂತನಾಗುತ್ತಿದ್ದ. ಪಾಪ ಅವರು ಒಂದೇ ವರ್ಷ ನಮ್ಮ ಶಾಲೆಯಲ್ಲಿ ಇದ್ದರು. ಅವರ ಒಲವು ಆಧ್ಯಾತ್ಮದತ್ತ ಇತ್ತು. ನನ್ನ ಮೇಲೆ ತುಂಬ ಪ್ರೀತಿ ತೋರಿಸುತ್ತಲೂ ಇದ್ದರು. ಅನಂತರ ಅವರನ್ನು ನೋಡಲಿಲ್ಲ. ಬೆಂಗಳೂರಿನಲ್ಲಿ ರಾಮಾಯಣ, ಭಾರತ ಪುಸ್ತಕಗಳನ್ನು ಅವರ ಸಂಪಾದಕತ್ವದಲ್ಲೇ ಪ್ರಕಟಿಸುತ್ತಿದ್ದಾರೆಂದು ಕೇಳಿದ್ದೆ.

ನಮ್ಮ ಹೈಸ್ಕೂಲಿನ ಹೆಡ್ಮಾಸ್ಟರರು ಒಬ್ಬ ಅರಸ್. ಬಹುಶಃ ಸುಬ್ರಹ್ಮಣ್ಯ ರಾಜೇ ಅರಸ್ ಇರಬೇಕು. ಮೈಸೂರು ಪೇಟಾ, ಕಚ್ಚೆ ಪಂಚೆ, ಕೋಟು, ತೀರ ತೆಳ್ಳಗಿದ್ದರು. ಒಳ್ಳೆಯ ಭಾಷಣಗಾರ, ಇಂಗ್ಲಿಷ್ ಪಾಠ ಮಾಡುತ್ತಿದ್ದರು: ಎಸ್.ಎಸ್.ಎಲ್.ಸಿ.ಯಲ್ಲಿ ಇಂಗ್ಲಿಷ್ ಪಠ್ಯದ ಮೊದಲನೆಯ ಪಾಠ ಮುಗಿಸಲು ಒಂದು ತಿಂಗಳು ತೆಗೆದುಕೊಂಡಿದ್ದರು. ಆಮೇಲೆ ಉಳಿದ ಪಾಠಗಳನ್ನು ಹಾರಿಸಿದ್ದೇ. ಅವರ ಕ್ಲಾಸ್ ತಪ್ಪಿಸಲು ಮನಸ್ಸಾಗುತ್ತಿರಲಿಲ್ಲ. ಹೈಸ್ಕೂಲಿನಲ್ಲಿ ಮೂರು ವರ್ಷವೂ ಪರೀಕ್ಷೆಯಲ್ಲಿ ನಾನು ಪ್ರಥಮ ಸ್ಥಾನ ಪಡೆಯುತ್ತಿದ್ದೆ. ಹುಣಸೂರ್ ವರ್ಕ್ಸ್‌ನವರು (ಕಾಫೀ ಕ್ಯೂರಿಂಗ್ ವರ್ಕ್ಸ್) ಕೊಡುತ್ತಿದ್ದ ಪ್ರಥಮ ಬಹುಮಾನ ನನಗೆ ಸಿಕ್ಕಿತ್ತು. ಆಗಿನ ಕಾಲದ ಐದು ರೂಪಾಯಿ. ಹೈಸ್ಕೂಲಿನ ಕೊನೆಯ ವರ್ಷದ ಶಾಲಾ ವಾರ್ಷಿಕೋತ್ಸವದ ದಿನ ಹುಣಸೂರಿನಲ್ಲಿ ಸಂತೆ, ನಮ್ಮ ಹೋಟೆಲಿಗೂ ವ್ಯಾಪಾರ ಜೋರು. ನಾನು ಸಮಾರಂಭಕ್ಕೆ ಹೋಗಲಾಗಲಿಲ್ಲ. ರಾತ್ರಿ ಎಂಟು ಗಂಟೆಗೆ ಹೋಗಿ ಜನರ ಮಧ್ಯೆ ನಿಂತಿದ್ದಾಗ ಪ್ರಥಮ ಬಹುಮಾನ ಪಡೆಯಲು ನನ್ನ ಹೆಸರು ಕರೆದಾಗ ರೋಮಾಂಚನಗೊಂಡೆ. ಆದರೆ ಕೊಳಕು ಅಂಗಿ ಚಡ್ಡಿಯಲ್ಲಿದ್ದ ನಾನು ಸ್ಟೇಜ್‌ಗೆ ಹೋಗಲಿಲ್ಲ. ಹುಡುಗ ಬರಲಿಲ್ಲ ಎಂದು ಅನೌನ್ಸ್ ಮಾಡಿ ಮಾರನೆ ದಿನ ಶಾಲೆಗೆ ಹೋದ ಮೇಲೆ ಕೊಟ್ಟರು. ಪಬ್ಲಿಕ್ ಪರೀಕ್ಷೆಯಲ್ಲಿ ಶಾಲೆಗೊಂದು ರ್‍ಯಾಂಕ್ ನನ್ನಿಂದ ಬರಬಹುದೆಂದು ನಿರೀಕ್ಷಿಸಿದ್ದರು. ಅನಾರೋಗ್ಯವೋ ಏನೋ ಹತ್ತು ರ್‍ಯಾಂಕ್‌ಗಳಲ್ಲಿ ಒಂದು ಬರಲಿಲ್ಲ. ಆದರೆ ಸ್ಟೇಟ್‌ಗೆ ಮೂವತ್ತ ನಾಲ್ಕನೇ ರ್‍ಯಾಂಕ್

ನನ್ನದು. ನನಗೆ ಇದೊಂದು ದೊಡ್ಡ ಸಂಗತಿ ಅಂತ ಅನಿಸಲಿಲ್ಲ. ಆದರೆ ನನ್ನ ವಿದ್ಯಾರ್ಥಿ ಜೀವನದ ಸುವರ್ಣ ಕಾಲ. ನಾನು ಹೈಸ್ಕೂಲಿನಲ್ಲಿ ಕಳೆದ ಕಾಲ. ನನ್ನ ಸಹಪಾಠಿಗಳಲ್ಲಿ ಭಾರ್ಗವ ಈಗ ಸಿನಿಮಾ ದಿಗ್ದರ್ಶಕ ಹಾಗೂ ನಿರ್ಮಾಪಕ. ಗೋವಿಂದ ರಾಜ ಟೆಲಿಕಮ್ಯುನಿಕೇಶನ್ನಿನ ಅಧಿಕಾರಿ. ಇನ್ನೊಬ್ಬ ಲಕ್ಷ್ಮೀ ನಾರಾಯಣ ಅಂತ ಇದ್ದ. ಅವನು ಏನಾದನೋ ತಿಳಿಯದು. ಮತ್ತೊಬ್ಬಳು ಶ್ರೀ ಲಕ್ಷ್ಮಿ ಅಂತ ಇದ್ದಳು ಅವಳೂ ಈಗ ಅಜ್ಜಿ ಆಗಿರಬಹುದು. ನನ್ನ ಕಾಲೇಜಿನ ದಿನಗಳ ಬಗ್ಗೆ ಹೇಳುವುದಕ್ಕಿಂತ ಹೇಳದಿರುವುದು ಲೇಸು ಅನ್ನಿಸುತ್ತದೆ. ಕಾಲೇಜು ದಿನಗಳನ್ನು ನಾನು ಅಷ್ಟು ಚೆನ್ನಾಗಿ ಕಳೆಯಲಿಲ್ಲ. ನನ್ನ ಅಣ್ಣ ನನ್ನ ಮೇಲೆ ಪ್ರೀತಿ ಇಟ್ಟು ಇಂಟರ್ ಮೀಡಿಯೇಟ್ ಮತ್ತು ಬಿ.ಎಸ್.ಸಿ. ಕ್ಲಾಸುಗಳಿಗೆ ಕಳಿಸಿದ. ಆದರೆ ಅಲ್ಲಿಯ ಯಾವ ಪ್ರೊಫೆಸರ್ ಆಗಲೀ ನನ್ನ ಮೇಲೆ ಅಂಥ ಪರಿಣಾಮ ಬೀರಲಿಲ್ಲ. ನನ್ನ ಪ್ರತಿಭೆಗೂ ಸ್ವಲ್ಪ ಮಂಜು ಕವಿದಂತೆ ಇತ್ತು. ಆದರೆ ಇದೇ ಸಂದರ್ಭದಲ್ಲಿ ನಾನೊಬ್ಬ ಬರಹಗಾರನಾಗಿ ರೂಪಿತಗೊಂಡೆ ಎಂಬುದಂತೂ ಸುಳ್ಳಲ್ಲ. ಈ ವಿಚಾರವನ್ನು ಬೇರೆಯೇ ಸಂದರ್ಭದಲ್ಲಿ ವಿವರಿಸಬಹುದೋ ಏನೋ!



ಗಾಬ್ರಿ ಬೇಡ ಯಜಮಾನ್ರೆ, ಟೆಕ್ಟಾನಿಕ್‌ಫಾಲ್ಟ್
ನಮ್ಮೂರಿನಲ್ಲಿ ಹಾದು ಹೋಗುಲ್ಲಂತೆ

ಬಯಕೆಗಳು!

- ಶೋಭಾ ಪ್ರಮೋದ್

"Wants are unlimited but means are limited' ಎಂದು ಅರ್ಥಶಾಸ್ತ್ರದಲ್ಲೊಂದು ಹೇಳಿಕೆಯಿದೆ. ಹೆಣ್ಣು=ಬಯಕೆ ಎಂದೇ ಅನೇಕ ಪುರುಷರು ಅರ್ಥೈಸಿಕೊಳ್ಳುವವರೂ ಇದ್ದಾರೆನ್ನಿ.

ವಿವಾಹವಾಗಿ ಎರಡು ವರ್ಷವಾದರೂ, ನನಗೆ ಮಕ್ಕಳಾಗಿರಲಿಲ್ಲ. ಬಳಿಕ ಬಸುರಿಯಾದೆ. ನಮ್ಮದು ಮೂರು ಹಳ್ಳಿಯ ಮುಖಂಡರ ಮನೆ. ಧಾರ್ಮಿಕ ಸಮಾರಂಭಗಳಲ್ಲಿ, ಮಸಣದ ಕಾರ್ಯ (?!) ಗಳಲ್ಲಿಯೂ ಮುಖಂಡರು ಬೇಕೇ ಬೇಕು! ಸರಿ, ಒಬ್ಬ ಮರಾಠಿ ವ್ಯಕ್ತಿ; ಸತ್ಯನಾರಾಯಣ ಪೂಜೆಗೆ ನಮ್ಮನ್ನು ಕರೆದಿದ್ದರು. ಪತಿಯೊಂದಿಗೆ ಹೋಗಿದ್ದೆ. ಅಂಗಳದಲ್ಲಿ ನೂರಾರು ಜನರು ಭೋಜನಕ್ಕೆ ಕುಳಿತಿದ್ದರು. ಅನ್ನ ಅವರೆಕಾಳಿನ ಸಾರು, ಉಪ್ಪಿನಕಾಯಿ, ಶಿರಾ ಇಷ್ಟೇ ಬಡಿಸಲಾಗಿತ್ತು. ಒಳಗಡೆ ಮತ್ತೇ ಸಾರು ತಯಾರಿಸುತ್ತಿದ್ದರೆಂದು ಕಾಣುತ್ತೆ!! ಯಾವುದೋ ಸುಂದರ ಘಮ-ಘಮ ವಾಸನೆಯು, ನನ್ನ ನಾಸಿಕಾಗ್ರವನ್ನು ಹೊಕ್ಕು, ಮೆದುಳಿಗೆ ಆದೇಶವನ್ನು ನೀಡಿತು. ಪರಿಣಾಮ, ಕಾಲುಗಳು ಮುಂದೆ ಚಲಿಸದೆ, ಮೊಂಡು ಹಠ ಮಾಡಿದವು!! ದೇವರಿಗೆ ನಮಸ್ಕರಿಸಿ ಹೊರಟಾಗ, ''ಸ್ವಲ್ಪ ಊಟಮಾಡಿ ಹೋಗಿ'' ಎಂದು ಮನೆಯಾತ ಒತ್ತಾಯಿಸಿದರು, ನಾನು ಪತಿರಾಯರಿಗೆ ಮೆಲ್ಲನೆ ''ಊಟ ಮಾಡೋಣ್ವಾ''?! ಎಂದೆ!! ಆದರವರ ಕೆಂಗಣ್ಣು, ದುರು-ದುರು ನೋಟದ ವೇಗೋತ್ಕರ್ಷವನ್ನು ಅಳತೆ ಮಾಡಲಿಕ್ಕಾಗದೆ, ಸುಮ್ಮನೇ ಮನೆಗೆ ಬಂದೆ.

''ಅಮ್ಮ, ಇವ್ಳಿಗೆ ಒಂದಿಷ್ಟೂ ನಾಚಿಕೆಯಿಲ್ಲ. ಆ ಮರಾಠಿಗರ ಮನೆಯಲ್ಲಿ ಊಟ ಮಾಡ್ತಾಳಂತೆ ನಾವೇನು? ನಮ್ಮ ಗೌರವ-ಘನತೆಗಳೇನು? ಎಂದೆಲ್ಲ ಬಯ್ಗಳೆಂಬ ''ಶಿವಲೀಲಾಮೃತ''ಗಳನ್ನು ಪಠಿಸಿದರು!

''ಹೌದು ಕಣೋ, ಗರ್ಭಿಣಿಯರಿಗೆ ಅನೇಕ ಬಯಕೆಗಳಿರುತ್ತವೆ. ನೀನು ಹೊಟ್ಟೆಯಲ್ಲಿದ್ದಾಗ ನನಗೆ ಮರಾಠಿ ಮಂದಿಯ ಮನೆಯಲ್ಲಿ ''ಭಾಕ್ರಿ'' ತಿನ್ನುವ ಆಸೆಯಾಗಿತ್ತು. ತಿಂದಿದ್ದೆ ಕೂಡ''!! ಎಂದು ಅತ್ತೆಯವರು ಸರಿಯಾಗಿ ಒಗ್ಗರಣೆ ಹಾಕಿದರು. ಆಗ ಇವರ ಮುಖ ಇಂಗುತಿಂದ ಮಂಗನಂತಾಗಿತ್ತು!

ಕೊಂಕಣ ರೈಲ್ವೆ ಆರಂಭವಾಗುವ ಮುನ್ನ ಬಿರುಸಿನಿಂದ ಕೆಲಸ ನಡೆದಿತ್ತು. ರತ್ನಗಿರಿ - ಮುಂಬೈ ಮಾರ್ಗದಲ್ಲಿ ನಮ್ಮೂರಿತ್ತು. ಕನ್ನಡ ಮಾತನ್ನಾಡುವ

ಕೆಲಸಗಾರರು ಬಂದಿದ್ದರು. ಅವರು ಮರಕ್ಕೆ ಜೋಳಿಗೆ ಕಟ್ಟಿ, ಮಕ್ಕಳನ್ನು ಮಲಗಿಸಿ, ಮೂರು ಕಲ್ಲುಗಳನ್ನಿಟ್ಟು ಅಡುಗೆ ಮಾಡುತ್ತಿದ್ದರು. ಹೆಂಗಸರು, ಗಂಡಸರು, ಮಕ್ಕಳು ನಾಳೆಯ ಚಿಂತೆಯಿಲ್ಲದೆ, ನಕ್ಕು ಜೀವನ ಸಾಗಿಸುತ್ತಿದ್ದರು.

ಒಮ್ಮೆ ನಾನು ಬ್ಯಾಂಕಿಗೆ ಹಣ ತುಂಬಲು ಹೋಗಿದ್ದೆ. ಮರದ ಕೆಳಗೆ ಸಾಂಬಾರಿನ ಘಮ-ಘಮ!! ರಾಘವೇಂದ್ರ ಗುರುಗಳ ಮಠದಲ್ಲಿ ''ಹುಳಿ'' ಮಾಡ್ತಾರಲ್ಲ?! ಹಾಗೆ ವಾಸನೆ ಬರ್ತಿತ್ತು! ಮತ್ತೇ ನನ್ನ ಕಾಲುಗಳು ಮುಷ್ಕರ ಹೂಡೆದವು. ಎಷ್ಟು ಆಸೆಯಾಯಿತೆಂದರೆ, ಅವರ ಹತ್ತಿರ ಹೋಗಿ, ಕನ್ನಡ ಮಾತನಾಡಿ, ದೋಸ್ತಿ ಸಂಪಾದಿಸಿ, ಅವರೊಂದಿಗೆ ಊಟ ಮಾಡಿಯೇ ತೀರಬೇಕೆಂದು! ಹೇಗೋ, ಕಾಲು ಎಳೆದುಕೊಂಡು ಬ್ಯಾಂಕಿಗೆ ಹೋಗಿ ಬಂದೆ ಎನ್ನಿ!

ನಮ್ಮ ಅತ್ತೆಯವರು ಬಹಳ ಒಳ್ಳೆಯವರು. ಅವರ ಬಗ್ಗೆ 'ತರಂಗ'ದಲ್ಲಿ ನಾನೊಮ್ಮೆ ಲೇಖನ ಬರೆದಾಗ ಅನೇಕ ಓದುಗ ಮಹಿಳೆಯರು ''ಎಲ್ಲಾ ಸುಳ್ಳೇ ಬರೆದಿದ್ದಾರೆ. ಅತ್ತೆ ಅಮ್ಮನಾಗಲಿಕ್ಕೆ ಸಾಧ್ಯವಿಲ್ಲ'' ಎಂದು ಪ್ರತಿಕ್ರಿಯೆ ಬರೆದಿದ್ದುಂಟು. ನನ್ನ ಅತ್ತೆಯೊಂದಿಗೆ ಜಗಳ ಮಾಡಬೇಕೆಂಬ ಆಸೆ ಕೂಡ ಆಗುತ್ತಿತ್ತು. ಆದರೆ ಅವರೇ ಪಾಪ, ಸುಮ್ಮನೇ ಇರುತ್ತಿದ್ದಾಗ ನನ್ನಾಸೆ ಒಡೆದ ಬಲೂನಾಗಿತ್ತು ಸ್ವಾಮಿ!!

ಈಗ ನನ್ನ ಮಕ್ಕಳು ಶಾಲೆಗೆ ಹೋಗುತ್ತಾರೆ. ಎಷ್ಟೋ ಸಲ ರಾಯರ ಮಠದಲ್ಲಿ ಊಟ ಮಾಡಿದ್ದೇನೆ. ಮನೆಯಲ್ಲಿಯೂ ಸಾರು, ಸಾಂಬಾರು ಮಾಡಿದ್ದೇನೆ. ಆದರೆ ಗರ್ಭಿಣಿಯಾಗಿದ್ದಾಗ, ಅಂದಿನ ''ಘಮ-ಘಮ'' ಮತ್ತೇ ನನ್ನ ನಾಸಿಕಕ್ಕೆ ಅನುಭವವಾಗಿಲ್ಲ ಮಾರಾಯ್ರೇ!

ಪ್ರಿಯ ಓದುಗರೇ, ನಿಮ್ಮ ಮಡದಿಗೂ, ಹೀಗೆಯೇ ಬಯಕೆಗಳುಂಟಾದರೆ ಖಂಡಿತ ನಿರಾಕರಿಸದಿರಿ. Even ಮಣ್ಣು-ಕಲ್ಲು, ಹುಣಸೆ ಹಣ್ಣು, ಬೋರೆ ಹಣ್ಣು ತಿನ್ನುವ ಬಯಕೆಯಾದರೂ ಸರಿ! ಆಕೆಯೂ ಲೇಖಕಿಯಾದರೆ ಇಂತಹ ''ಅತೃಪ್ತ ಬಯಕೆ''ಗಳ ಬಗ್ಗೆ ಲೇಖನ ಗೀಚಿಯಾಳು! ಇಂತಹ ಅತೃಪ್ತ ಆಸೆಗಳು, ಸಾಯುವ ತನಕ ಜೀವಂತವಾಗಿದ್ದರೆ, ಅತೃಪ್ತ ಆತ್ಮಗಳು ಹುಟ್ಟಿಕೊಂಡಾವು! ''ನಾರಾಯಣ ನಾಗಬಲಿ'' ಇತ್ಯಾದಿ ಧಾರ್ಮಿಕ ವಿಧಿಗಳನ್ನಾಚರಿಸಲು ನೀವು ನಾಸಿಕಕ್ಕೆ, ಗೋಕರ್ಣಕ್ಕೆ ಹೋಗಬೇಕಾದೀತು!! ಹೀಗಾಗಿ ಹೆಂಡ್ತಿಯ ಆಸೆಯನ್ನು ಪೂರೈಸುವುದೊಂದೇ ಉಪಾಯ! ಏನಂತೀರಾ?!

ಮಗುವಿಗೆ ಹೆಸರೇನಿಡಲಿ?

– ಡಾ|| ವೆಂಕಟರಮಣ

ಬೆಂಗಳೂರಿನ ತಿಮ್ಮಯ್ಯನಿಗೆ ಮಗುವಾಯಿತು. ಹೆತ್ತಿದ್ದು ಅವನ ಹೆಂಡತಿ ಭಾಗ್ಯಲಕ್ಷ್ಮಿ. ಗಂಡು-ಹೆಣ್ಣು ಸಮಾನವೆನ್ನುವ ಈ ದಿನಗಳಲ್ಲೂ ಮಗುವನ್ನು ಹೆರುವ ಜವಾಬ್ದಾರಿ ಇನ್ನೂ ಗಂಡಿಗೆ ವರ್ಗವಾಗಿಲ್ಲ. ಅಂಥ ದಿನ ಬೇಗನೆ ಬರುವ ಸಾಧ್ಯತೆಯೂ ಕಂಡುಬರುತ್ತಿಲ್ಲ! ಮಗುವನ್ನು ಆಮೇಲೆ ಹೊರುವ ಹೊಣೆ ಗಂಡಿಗೆ ಆಗಾಗ ಇದ್ದದ್ದೇ!

ಭಾಗ್ಯಮ್ಮನ ಹೆರಿಗೆ ದೂರದ ಶಿವಮೊಗ್ಗದಲ್ಲಾಯಿತು. ಅದವಳ ತವರೂರು. ತಂತಿ ಸಂದೇಶದಲ್ಲಿ ಶಿಶು Male child, congratulations ಎಂದಿತ್ತು. ತಿಮ್ಮಯ್ಯ ಉಬ್ಬಿದ. ಗಂಡು ಮಗುವಿಗೆ ತಂದೆಯಾಗುವುದು ಸಾಮಾನ್ಯ ವಿಚಾರವೇ? ಪುತ್ರನಿಗೆ ಹೆಸರೇನಿಡಬೇಕೆಂದು ತಲೆಯೋಡಿಸಿದ ತಿಮ್ಮಯ್ಯ. ಹಳೆಯ ಕಾಲದ ರಾಮಣ್ಣ, ಭೀಮಣ್ಣ, ವೆಂಕಣ್ಣ ಮುಂತಾದ ಹೆಸರನ್ನು ಈಗ ಯಾರೂ ಒಪ್ಪರು. ಅನಂತಪದ್ಮನಾಭ ಯಾ ಶಂಕರನಾರಾಯಣ ಇತ್ಯಾದಿ ಉದ್ದುದ್ದ ನಾಮಧೇಯ ಕೂಡ ರುಚಿಸದು. ಬೆಳ್ಳಿತೆರೆಯ ಅಮೀರ್, ರೋಶನ್, ಋತ್ವಿಕ್, ತೇಜಸ್ವಿ ಇತ್ಯಾದಿ ಎರಡೂವರೆ-ಮೂರಕ್ಷರಗಳ ಹೆಸರೀಗ ಜನಪ್ರಿಯ. ನಮ್ಮ ತಿಮ್ಮಯ್ಯನ ಯೋಚನಾಲಹರಿ ವಿವಿದೆಡೆ ಹರಿದಾಡಿತು.

ಪಕ್ಕದ ಮನೆಯ ಪ್ರಹ್ಲಾದಾಚಾರ್ಯರು ಮಗುವಿನ ಜನ್ಮನಕ್ಷತ್ರ ಉತ್ತರಾ ಎಂದು ತಿಳಿಸಿ, ಅದರ ಪ್ರಕಾರ ಟೆ, ಟೊ, ಪೆ, ಪಿ ಎಂಬಕ್ಷರಗಳಿಂದ ಮೊದಲಾಗುವ ಹೆಸರು ಸೂಕ್ತವೆಂದರು. ತಿಮ್ಮಯ್ಯ ಪುನಃ ಯೋಚಿಸಿದ. ಟೊಣಪ, ಟೊಮ್ಯಾಟೋ, ಪೆಂಟಯ್ಯ, ಪೆದ್ದಣ್ಣ, ಪಿಂಗಳ ಇತ್ಯಾದಿ ಇಡಲಾಗದ ಹೆಸರಷ್ಟೇ ಅವನಿಗೆ ಹೊಳೆದವು. ಸುಂದರವಾದ ತನ್ನ ಕುವರನಿಗೆ ನಾಮಕರಣ ಯೋಗ್ಯ ಯಾವುದೇ ಹೆಸರನ್ನು ಆತ ಯೋಚಿಸದಾದ, ನಕ್ಷತ್ರ ಪ್ರಕರಣದಲ್ಲಿ.

ತಿಮ್ಮಯ್ಯನ ತಂದೆ ಸೋಮಯ್ಯ. ಭಾಗ್ಯಮ್ಮನ ತಂದೆ ಬಲವೀರಯ್ಯ. ಕಂದನಿಗೆ ಅಜ್ಜನ ಹೆಸರಿಡುವ ಪರಿಪಾಠದಲ್ಲಿ ಸೋಮಯ್ಯನವರ ಮೊಮ್ಮಗನಿಗೆ ಸೋಮಪ್ಪ, ಸೋಮಶೇಖರ, ಸೋಮೇಶ ಎಂದಾಗಿ ಹೆಸರಿಡಬಹುದಾಗಿತ್ತು. ಹೀಗೆಯೇ ಕೈ ಹಿಡಿದವಳ ವಂಶದ ಜಾಡು ಹಿಡಿದು ಬಲವೀರ, ಬಲರಾಮ,

ಬಾಲಯ್ಯ ಎಂಬ ಹೆಸರುಗಳೂ ತಿಮ್ಮಯ್ಯನ ಯೋಚನೆಯ ಬಲೆಗೆ ಸಿಲುಕಿದವು ತನ್ನ ತಂದೆಯ ನಾಮಧೇಯಕ್ಕೆ ಒತ್ತು ನೀಡಿದರೆ ಹೆಂಡತಿಗೊಪ್ಪಿಗೆ ಯಾಗಬಹುದೇ, ಬಲವೀರಯ್ಯನವರಿಗೆ ಮನ್ನಣೆ ಕಡಿಮೆಯಾಯಿತೆನ್ನಬಹುದೇ? ಅವರು ಧನಿಕ, ಧನಬಲವಿರುವ ಬಲವೀರಯ್ಯ. ಧನಬಲದ ಎದುರು ಬೇರೆ ಯಾವ ಬಲವೂ ನಿಲ್ಲದ ಇಂದಿನ ದಿನಗಳಲ್ಲಿ ತಾನೇನು ಮಾಡಲಿ, ಕುಮಾರನಿಗೆ ತಕ್ಕ ಹೆಸರಿಗೆ? ಹೀಗೆ ಪರಿಪರಿಯಾದ ಯೋಜನೆ (ಅದು ಚಿಂತೆ ಎಂದರೂ ಸರಿಯೇ) ತಿಮ್ಮಯ್ಯನ ಮಸ್ತಿಷ್ಕದಲ್ಲಿ ಓಡಾಡಿತು. ಆತನಲ್ಲಿ ಒಟ್ಟು ಗೊಂದಲ ಏರ್ಪಟ್ಟಿತು.

ಆ ಕಡೆಯೂ ಬೇಡ, ಈಕಡೆಯೂ ಬೇಡವೆನ್ನುವ ನಡುಮಾರ್ಗದ ಬಗ್ಗೆ ತಿಮ್ಮಯ್ಯ ಚಿಂತಿಸಿದ. ಈ ನಿಟ್ಟಿನಲ್ಲಿ ಸೋಮಬಲ, ಬಲಸೋಮ, ಸೋಮವೀರ, ವೀರಸೋಮ ಇತ್ಯಾದಿ ಮಿಶ್ರತಳಿಯ ಹೆಸರು ತಿಮ್ಮಯ್ಯನ ಸೂಕ್ಷ್ಮಮತಿಗೆ ಸಿಲುಕಿದವು. ಆದರೆ ಕಂದನ ಹೆಸರಿನಲ್ಲಿ ನವ್ಯತೆಯಿರಬೇಕು, ಸೊಗಸಿರಬೇಕು; ಈ ಮಗು ಇಟ್ಟು ಹೆಸರನ್ನು ತನ್ನ ಜೀವಮಾನವೆಲ್ಲಾ ಹೊತ್ತು ತಲೆಯೆತ್ತಿ ತಿರುಗಾಡುವಂತಿರಬೇಕು; ಓಬೀರಾಯನ ಕಂತೆಯಿಂದ ತೆಗೆದದ್ದಿರಬಾರದು ಅದು, ತೀರ ಉದ್ದದ ಹೆಸರು ಸಲ್ಲದು, ಯಾರಿಗೂ ಅಸಂತೃಪ್ತಿ ತರದ ನಾಮಧೇಯವಾಗಿರಬೇಕು, ತುರ್ತಾಗಿ ಕರೆಯಲು ಚುಟುಕು ಹೆಸರನ್ನು ಆರಾಮವಾಗಿ ಕೆತ್ತುವಂತಿರಬೇಕು - ಇಂಥ ಹಲವಾರು ವಿಚಾರಗಳು ತಿಮ್ಮಯ್ಯನ ಯೋಚನಾ ತರಂಗದಲ್ಲಿದ್ದವು. ಅಂತರಂಗದಲ್ಲಿ ಆತನಿಗೆ ಬಿಕ್ಕಟ್ಟಾಗಲು ಸಾಕಷ್ಟು ಪೂರಣ ಇಲ್ಲಿತ್ತು. ಮಗು ಹುಟ್ಟಿದ್ದೇ ಸಮಸ್ಯೆ ಎನ್ನುವ ಮಟ್ಟಿಗೂ ತಿಮ್ಮಯ್ಯನ ವಿಚಾರಧಾರೆ ಹರಿಯಿತು! ಅಲ್ಲ ಬರಿಯ ಗುಂಡಣ್ಣ ಯಾ ಗುಂಡಪ್ಪ ಎನ್ನುವ ಹೆಸರಿನ ಕುರಿತೂ ಯೋಚಿಸಿದ.

ಮನವೊಂದು ಕೋತಿ. ತಿಮ್ಮಯ್ಯನ ಮನಸ್ಸು ಇದಕ್ಕೆ ಹೊರತಾಗಿರಲಿಲ್ಲ. ಸೂಕ್ಷ್ಮಪ್ರಕೃತಿಯ ಅವನು ಮತ್ತೆ ಯೋಚಿಸಿದ. ಮಿಶ್ರತಳಿಯ ಹೆಸರೇನೋ ಸರಿ; ಆದರೆ ಸೋಮವೀರನೆಂದರೆ ತಂದೆಯತ್ತ ವಾಲಿದಂತೆ; ಸೋಮನೆಂಬ ಪೂರ್ವಾರ್ಧ ತಂದೆಯ ಕಡೆಯಿಂದ ಬಂದಿದ್ದು. ವೀರಸೋಮನೆಂದರೆ ತಾಯಿಯ ಕಡೆಯ ತೂಕವೇರಿದಂತೆ. ತಿಮ್ಮಯ್ಯನ ಮನಸ್ಸಿನ ಗೊಂದಲವಿಲ್ಲಿ ಸಮತೆಯನ್ನು ಕಾಯುವ ಬಗ್ಗೆ ಹಾಗೂ ಅದು ತೋರಿಕೆಗೆ ಸ್ಪಷ್ಟವಾಗುವ ಕುರಿತು. ಈ ಬಗ್ಗೆ ಆತ ಚಿಂತಾಕ್ರಾಂತನಾದ. ಸೋಮವೀರ ಯಾನೇ ವೀರಸೋಮ ಎನ್ನುವ

ಜೊತೆ ಹೆಸರನ್ನೂ ಆತ ಲೆಕ್ಕಿಸದಿರಲಿಲ್ಲ. ಸರಿ, ಹೋಗಲಿ; ತನ್ನ ಮತ್ತು ತನ್ನವಳ ಹೆಸರಿನ ಚೂರುಗಳನ್ನು ಜೋಡಿಸಿ ಭಾಗ್ಯತಿಮ್ಮ ಎಂದು ಯಾಕೆ ಕರೆಯಬಾರದು ಎಂದೂ ಆತ ಚಿಂತಿಸಿದ. ಭಾಗ್ಯಮ್ಮನ ಹೆಸರಿನ ತುಣುಕು ಮೊದಲಿರುವುದರಿಂದ ಮನೆಯೊಡೆಯನ ಒಡತಿಗೆ ನಾಖುಶಿಯೂ ಇಲ್ಲ! ಆದರೆ ಇದು ಹಿರಿಯರ ಒಪ್ಪಿಗೆ ಪಡೆಯುವುದು ಕಷ್ಟವಿತ್ತು.

ತಿಮ್ಮಯ್ಯನ ವಾಸ ಈಗ ಬೆಂಗಳೂರಿನಲ್ಲಾದರೂ ಆತ ಮೂಲತಃ ಕೆಂಗಲ್‌ನವನು. ಯಾವುದೇ ಯೋಚನೆಯನ್ನೂ ಮಾಡದೆ ಆತ ಊರಿನ ಅಧಿದೇವತೆ ಹನುಮಂತರಾಯನ ಹೆಸರನ್ನು ಕುಮಾರನಿಗಿಡುವ ವಿಚಾರ ಮಾಡಿದ. ಚುಟುಕಾಗಿ ಹನುಮ ಯಾ ಹನುಮೇಶ ಎಂದರಾಯಿತೆಂದ. ವೀರ ಮಾರುತಿಯ ಹೆಸರಿಟ್ಟರೆ ಭೂತ, ಪ್ರೇತ ಪಿಶಾಚಿಗಳ ಯಾ ಮಂತ್ರ ಮಾಟಗಳ ಭಯವೂ ನಿವಾರಣೆಯಾದಂತೆ. ಆದರೆ ಇದರಿಂದ ಹಿರಿಯರ ವರ್ಗದಲ್ಲಿ ಅತೃಪ್ತಿಯ ಭಯವಿತ್ತು. ಮಾತನಾಡದ ದೇವರ ಕೃಪೆಗಿಂತ ಮಾತಾಡುವ ಮನುಜರ ಅವಕೃಪೆ ತಿಮ್ಮಯ್ಯನಿಗೆ ಬಲಯುತವೆನಿಸಿತು. ಸರಿ, ಏನೇ ಆಗಲಿ, ಶಿವಮೊಗ್ಗಕ್ಕೆ ತೆರಳಿ ಮುದ್ದು ಮಗನ ಮುಖದರ್ಶನದ ಬಳಿಕ ಹೆಸರಿನ ಆಯ್ಕೆ ಎಂದೆಣಿಸಿದ ತಿಮ್ಮಯ್ಯ. ಆತ ಅಲ್ಲಿಗೆ ತಲಪಿದ್ದೂ ಆಯಿತು. ಬೀಸ ಬೀಸನೆ ನಡೆದು ಅತ್ತೆಯ (ಮಾವನ!) ಮನೆಯನ್ನು ಸೇರಿದ್ದೂ ಆಯಿತು. ಬಾಗಿಲಲ್ಲೇ ಇದ್ದ ಅತ್ತೆಮ್ಮ, ''ಮುದ್ದು ಮಗಳನ್ನು ನೋಡಬನ್ನಿ'' ಎಂದು ನಸುನಗುತ್ತ ಸ್ವಾಗತಿಸಿದರು. ತಿಮ್ಮಯ್ಯನಿಗೆ ಸೋಜಿಗ, ಯಾಕೆಂದರೆ ಮಗನನ್ನು ಕಾಣಲು ಆತ ಬಂದಿದ್ದ. ಅತ್ತೆ ಬಹುಶಃ ತಮಾಶೆಗೆ ''ಮಗಳನ್ನು ನೋಡಿ'' ಎಂದಿರಬೇಕೆಂದು ನಮ್ಮ ನಾಯಕ ಭಾವಿಸಿದ. ಅತ್ತೆಯವರಿಂದ ಇಂಥ ಚೇಷ್ಟೆ ಅಪರೂಪವಾಗಿರಲಿಲ್ಲ. ಎಷ್ಟಾದರೂ ಆಕೆ ತುಂಟಿ ಮಡದಿಯ ತಾಯಿಯಲ್ಲವೇ? ತಿಮ್ಮಯ್ಯ ಖುಶಿಯಿಂದ ಒಳಸಾಗಿದ, ನುಗ್ಗಿದ ಎಂದರೂ ಸರಿ. ನವಜಾತ ಶಿಶು ಬೆಚ್ಚನೆಯ ಕೋಣೆಯಲ್ಲಿ ತನ್ನ ಮಾತೆಯ ಬೆಚ್ಚನೆಯ ಸಂಗದಲ್ಲಿ ಹಾಯಾಗಿ ಮಲಗಿತ್ತು; ಮುಖದಲ್ಲಿ ನಸುನಗು, ನಿಶ್ಚಿಂತೆಯ ಸಾಕಾರಮೂರ್ತಿ ಆದಾಗಿತ್ತು.

ತನ್ನ ಎರಡೂ ಕೈಗಳನ್ನೆತ್ತಿಕೊಂಡು ಮಗು ಮಲಗಿದ್ದನ್ನು ತಿಮ್ಮಯ್ಯ ಗಮನಿಸಿದ. ಕ್ರಿಕೆಟ್ ಆಟದ ಹುಚ್ಚಿರುವ (ಈಗದು match fixing ಪ್ರಕರಣದಿಂದ ಕಡಿಮೆಯಾಗಿತ್ತೆನ್ನಿ!) ತಿಮ್ಮಯ್ಯನಿಗೆ ಈ ದೃಶ್ಯ ದಾಂಡಿಗ ಚಂಡನ್ನು ಭಾರಿಯಾಗಿ ಬಾರಿಸಿ ಸಿಕ್ಸರ್ ಗಳಿಸಿದಾಗ ಅದನ್ನು ನಿರ್ಣಾಯಕ ಸಂಕೇತಿಸುವ

ದೃಶ್ಯ ನೆನಪಾದ್ದರಲ್ಲಿ ಆಶ್ಚರ್ಯವಿಲ್ಲ. ಆತ ಇನ್ನೂ ಯೋಚಿಸಿದ. ಜೀವನದ ಪ್ರಸಕ್ತ ಕ್ರಿಕೆಟಿನಲ್ಲಿ ಮಗುವಿನ ತಾಯಿ ತಂದೆ, ತಂದೆಯನ್ನು ಮತ್ತು ತಾಯಿಯನ್ನು ಹೆತ್ತು ಹೊತ್ತವರು ಒಟ್ಟು ಆರು ಜನ ಆರು ಓಟಗಳಿದ್ದಂತೆ. ಇದನ್ನು ಸೂಚಿಸಲೆಂದೋ ಏನೋ ಮಗು ಪಂದ್ಯದ ನಿರ್ಣಾಯಕನ ಪಾತ್ರ ವಹಿಸಿ ಕೈಗಳನ್ನೆತ್ತಿಕೊಂಡೇ ಮಲಗಿದ್ದಿರಬೇಕೆಂದು ತಿಮ್ಮಯ್ಯ ಭಾವಿಸಿದ.

ನಿದ್ರಿಸಿದ್ದ ಮಡದಿಯ ಮುಖವನ್ನು ತಿಮ್ಮಯ್ಯ ದಿಟ್ಟಿಸಿದ ಸಾಕಷ್ಟು ಪರಿಚಯದ ಮುಖವದು. ಪಕ್ಕದಲ್ಲೇ (ಕರ್ತೃತ್ವದಿಂದ ಸಂಬಂಧವಿದ್ದರೂ) ಇನ್ನೂ ಪರಿಚಯವಿಲ್ಲದ ಹಸುಳೆಯ ಮುದ್ದು ಮುಖ. ಆಹಾ! ಅದೆಂಥ ಮುಗ್ಧತೆ! ವಯಸ್ಸಿನಲ್ಲಿ (ಬುದ್ಧಿಯಲ್ಲಿ ಅಲ್ಲ!) ಬೆಳೆದವರಿಗೂ ಮಗುವಿಗೂ ಎಷ್ಟು ವಿಪರ್ಯಾಸ!! ಮುಂದಿನ ಕ್ಷಣ, ಮಗು ಅವನೋ, ಅವಳೋ ಎಂಬುದನ್ನು ಖಚಿತವಾಗಿ ನಿರ್ಣಯಿಸುವಲ್ಲಿಗೆ ತಿಮ್ಮಯ್ಯನ ದೃಷ್ಟಿ ಸಹಜವಾಗಿಯೇ ಹರಿಯಿತು. ಅಲ್ಲೊಂದು ವಿಪರ್ಯಾಸ ಅವನಿಗೆ ಕಾದಿತ್ತು; ಮಗು ಮರಿ ಭಾಗ್ಯಲಕ್ಷ್ಮಿಯಾಗಿದ್ದಳು!

ತಿಮ್ಮಯ್ಯ ಪೇಚಿಗೆ ಸಿಲುಕಿದ. ತನಗೆ ಬಂದಿದ್ದ ತಂತಿ ಸಂದೇಶ ಹಾಗಾದರೆ ತಪ್ಪೇ? ಅಯ್ಯೋ ಪಾಪ! ದಕ್ಷ ದೂರ ತಂತಿ ವಿಭಾಗದವರು Female Child ಎನ್ನುವ ಒಸಗೆಯನ್ನು ಶಿವಮೊಗ್ಗದಿಂದ ಬೆಂಗಳೂರಿಗೆ ಸಾಗಿಸುವಾಗ Male child ಎಂದು ಎಡದಿಂದ ಎರಡಕ್ಷರ ಕತ್ತರಿಸಿದರು. ಬಹುಶಃ ಹೆಣ್ಣಿನ ತಂದೆಯಾದವನಿಗೆ ತುಸುಕಾಲ 'ಗಂಡಿನ ತಂದೆ' ಎನಿಸುವ ಅವಕಾಶ ನೀಡುವುದು ಅವರ ಉದ್ದೇಶವಿತ್ತು!

ಈಗ ತಿಮ್ಮಯ್ಯನ ನಿಜವಾದ ಸಮಸ್ಯೆ ಬೇರೆಯೇ. ಮಗುವಿಗೆ ಯಾವ ಹೆಸರು ಸೂಕ್ತ? ಎಂಬ ಪ್ರಶ್ನೆ. ಇದಕ್ಕೆ ಅವನು ಮೊದಲಿಂದ ಉತ್ತರ ಹುಡುಕುವ ಯತ್ನ ಮಾಡಬೇಕಿತ್ತು. ಈ ಪ್ರಶ್ನೆ ಇನ್ನೂ ಜ್ವಲಂತ. ಇದಕ್ಕೆ ನಿಮ್ಮಿಂದಾಗುವ ಸಹಾಯವನ್ನು ಉದಾರ ಮತಿಗಳಾದ ನೀವು ಮಾಡುವಿರಾ? ನಮ್ಮಿಂದ ಧನಸಹಾಯದ ಔದಾರ್ಯವೇನೂ ಬೇಕಿಲ್ಲ! ತಿಮ್ಮಯ್ಯನ ಮನೆಯ ದೂರವಾಣಿ ಸಂಖ್ಯೆ 080-34111900. ನಿಮಗೆ ಶುಭವಾಗಲಿ

★★★

ಪುಸ್ತಕ ಪ್ರಪಂಚ

''ಹಾಸ-ಭಾಸ'' (ಹಾಸ್ಯ ಪ್ರಬಂಧಗಳು)

ಪುಟ: 136+8, ಬೆಲೆ: ರೂ. 50.00. 2000

ಲೇ: ಭುವನೇಶ್ವರಿ ಹೆಗಡೆ

ಪ್ರಕಾಶನ: ಸುಮಂತ ಪ್ರಕಾಶನ, ಉಪ್ಪಿನ ಕೋಟೆ, ಬ್ರಹ್ಮಾವರ - 576 213, ಉಡುಪಿ ಜಿಲ್ಲೆ.

ಹಾಸ್ಯ ಸಾಹಿತ್ಯ ಪ್ರಕಾರದಲ್ಲಿ ಶ್ರೀಮತಿ ಭುವನೇಶ್ವರಿ ಹೆಗಡೆಯವರನ್ನು ಅರಿಯದವರಿಲ್ಲ. ಇಂದಿನ ಕನ್ನಡ ನಗೆ ಸಾಹಿತ್ಯದಲ್ಲಿ ಇವರ ಹೆಸರು ಪ್ರಮುಖ ಸ್ಥಾನದಲ್ಲಿದೆ ಎಂದರೆ ಅತಿಶಯೋಕ್ತಿ ಅಲ್ಲ, ಇವರ ಬರಹಗಳಲ್ಲಿ ಇರುವ ಹೊಸತನವೆಂದರೆ, ನಮ್ಮ ನಿತ್ಯ ಜೀವನದಲ್ಲಿ ಕಾಣುವ, ಅನುಭವಿಸುವ ಸಣ್ಣಪುಟ್ಟ ಸಂಗತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಅದಕ್ಕೆ ಹಾಸ್ಯದ ಲೇಪನ ಹಚ್ಚಿ, ಸರಳ ಶೈಲಿಯಲ್ಲಿ ನಿರೂಪಿಸುವ ಪ್ರತಿಭೆ ಭುವನೇಶ್ವರಿಯವರಿಗೆ ದೈವದತ್ತ ಕೊಡುಗೆ.

ಈ ''ಆತಂಕ ಯುಗ''ದಲ್ಲಿ ನಾವು ನಮ್ಮ ಮನಸ್ಸಿಗೆ ಆತಂಕ ಒತ್ತಡಗಳು, ನಮಗೆ ಹಾನಿಯನ್ನುಂಟು ಮಾಡದಂತೆ ನೋಡಿಕೊಳ್ಳಬೇಕಾದರೆ ಈ ಹಾಸ್ಯಪ್ರಜ್ಞೆ ಬಹಳ ಪರಿಣಾಮಕಾರಿಯಾದ ಔಷಧ ''ಹಾಸ-ಭಾಸ'' ಇಂತಹ ನಗೆ ಹಾಸ್ಯ ಪ್ರಬಂಧಗಳ ಸಂಕಲನ. ಇದು ಇವರ ಐದನೆಯ ಕೃತಿ ''ಮುಳುಗು'', ''ನಕ್ಕು ಹಗುರಾಗಿ'', ''ಎಂಥದು ಮಾರಾಯ್ರೆ'', ''ವಲಲ ಪ್ರತಾಪ'' ಇವರ ಇತರ ಕೃತಿಗಳು. ಇವರ ಎಲ್ಲ ಪುಸ್ತಕಗಳಿಗೂ ಅನೇಕ ಸಂಘ ಸಂಸ್ಥೆಗಳ ಪ್ರಶಸ್ತಿಗಳು ದೊರೆತಿವೆ, ಕರ್ನಾಟಕ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಇವರಿಗೆ ಸಂದಿದೆ.


''ಶಿಸು ಮತ್ತು ಸಾಹಿತ್ಯ''. ''ಮಕ್ಕಳ ವ್ಯಾಜ್ಯ'', ''ಕೂಸಿರುವ ಮನೆಯಲಿ'' ಈ ಎಲ್ಲಾ ಲೇಖನಗಳಲ್ಲಿ ಮಕ್ಕಳ ಮುಗ್ಧತೆ ಹಾಗೂ ಅಮಾಯಕತೆಯನ್ನು ಗಮನಿಸಿ ಸ್ವಾರಸ್ಯವಾಗಿ ಬಣ್ಣಿಸಿದ್ದಾರೆ. ಈ ರೀತಿಯ ಹೃದಯವಂತಿಕೆ ಇರುವತನಕ ಬಾಳು ಎಂದೂ ಬರಡಾಗದು. ಶ್ರೀಯುತ ವೈದ್ಯರು ಬೆನ್ನುಡಿಯಲ್ಲಿ ಹೇಳಿರುವಂತೆ ''ಸ್ವಾರ್ಜಿತ ಕೂಡಿಗೆ ಸ್ವರಚಿತ ಜೋಗುಳ'' ಮಕ್ಕಳ ''ಶಿಶುಪ್ತಿ ಸ್ಥಿತಿ'' ''ಬಾಲ(!) ಲೀಲೆ'' ಇತ್ಯಾದಿ ಪದ ಚಿತ್ರಗಳು ಚೆನ್ನಾಗಿ ಮೂಡಿವೆ. ''ಮಧ್ಯಾಹ್ನದ ನಿದ್ದೆ'' ಮಾಡುವವರೆಲ್ಲಾ ಈ ಪ್ರಬಂಧ ಓದಲೇಬೇಕು. ''ಡೈರಿ ಬರೆಯುವುದು'', ''ಸತ್ಯ ಹೇಳುವುದೊಳ್ಳೆಯದು'. ''ಕುಸಿಯುತ್ತಿರುವ ಶಿಕ್ಷಣ ಮಟ್ಟ ಮತ್ತು

ಸೆಮಿನಾರುಗಳು ನಮ್ಮ ಸಮಾಜದ ಕುಂದು ಕೊರತೆಗಳನ್ನು ಬೆಳಕಿಗೆ ಹಿಡಿಯುವ ನಗೆ ಬರಹಗಳು, ಬೈಯಲು ಕಲಿಯಿರಿ'' ''ಕಸ ಕಡ್ಡಿಗಳ ನಡುವೆ.'' ''ಗಂಡಂದಿರ ಜೇಬು ಮತ್ತು ಹೆಂಡತಿಯರು ''ಮಂಗಳೂರಿನ ಬಸ್ಸು'', ''ನೀಲವೇಣಿಯರೇ ಜಾಗ್ರತೆ'' ಈ ಎಲ್ಲ ರಚನೆಯಲ್ಲೂ ಎಲ್ಲರೂ ಒಂದಲ್ಲ ಒಂದು ಬಾರಿ ಅನುಭವಿಸಿರುವ ದೃಷ್ಟಾಂತಗಳೇ! ಇದನ್ನು ಓದಿದಾಗ ಅದು ನೆನಪಿಗೆ ಬಂದು ನಗೆ ಹೊಮ್ಮುವುದು ಸಹಜವಲ್ಲವೆ? ಎಲ್ಲಕ್ಕಿಂತ ಬಹಳ ಪರಿಣಾಮಕಾರಿಯಾದ ಲೇಖನ ''ಜೀವನ ಮತ್ತು ಹೇರ್‌ಪಿನ್'' ಬದುಕಿನಲ್ಲಿ ಅಧ್ಯಾತ್ಮ, ತತ್ವದರ್ಶನಕ್ಕಾಗಿ ಪ್ರೊ-ಚಿಂತನಶೀಲರಾವ್ ಅವರ ಸಿದ್ಧಾಂತವನ್ನು ಬಳಸಿಕೊಂಡರೆ ಜೀವನದ ಅರ್ಥ ಬಹು ಸುಲಭವಾಗಿ ಗೋಚರವಾಗಬಹುದು, ಜೀವನದಲ್ಲಿ ಸತ್ಯದ ಅರ್ಥ ಹುಡುಕುವ ಪರಿಯನ್ನು ನಗೆಯ ಹರಹಿನಲ್ಲಿ ಹೆಣದಿರುವ ಈ ಪ್ರಬಂಧ ನಿಜಕ್ಕೂ ಪ್ರಬುದ್ಧವಾಗಿದೆ.

'ಹಾಸ-ಭಾಸ' ಅಂದಾಗಿ ಮುದ್ರಿತವಾಗಿದೆ. ತಪ್ಪಿಲ್ಲದ ಮುದ್ರಣ, ಅಚ್ಚುಕಟ್ಟಾದ ಚಂದನ ಪುಸ್ತಕ - ಬರಿಯ ಅಂದವೊಂದೇ ಅಲ್ಲ - ಆನಂದವನ್ನೂ ಕೊಡುವ ನಗೆ ಬರಹದ ಸಂಕಲನ, ಇವರ ಇಂತಹ ಕೃತಿಗಳು ಮತ್ತಷ್ಟು ಬರಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ

– ಕಮಲಾ ರಾಮಸ್ವಾಮಿ



ಮನೆ ಕಟ್ಟಿ ನೋಡು

– ಸವಿತಾ ನಾಗೇಶ್

ಬಾಡಿಗೆ ಮನೆಯಲ್ಲಿದ್ದ ಶಿವರಾಂ ತನ್ನದೇ ಆದ ಒಂದು ಸುಂದರ ಮನೆಯನ್ನು ಕಟ್ಟಿಸಿಯೇ ಬಿಟ್ಟ. ಅದೂ ಒಂದು ಪ್ರತಿಷ್ಠಿತ ನಗರದಲ್ಲಿ. ಬಾಡಿಗೆಗೆಂದು ಇದ್ದ ಆ ಮನೆಯ ಓನರುಗಳ ಕಾಟ ಮುಗಿಲು ಮುಟ್ಟಿತ್ತು. ಕರೆಂಟ್ ಬಿಲ್, ವಾಟರ್ ಬಿಲ್ ಎಂದು ಒಂದಕ್ಕೆರಡರಷ್ಟು ವಸೂಲಿ ಮಾಡುತ್ತಿದ್ದರು. ದಿನಕ್ಕೊಂದು ಕಡೆ ಮನೆಯ ಅಂದ ಚಂದ ಮಾರ್ಪಡಬೇಕಿತ್ತು!

ಪಾಡ ಇದ್ದರೆ ಗೊಣಗಾಡುತ್ತಿದ್ದರು. ಅಷ್ಟ್ಯಾಕೆ ತುಳಸಿ ಕಟ್ಟೆ ಇದ್ದರೂ ಸಹ ತೆಗೆಯಿರಿ ಎನ್ನುವಂಥ ಜನ. ಇವರು ಹೇಳಿದ್ದಕ್ಕೆಲ್ಲಾ ತಲೆಯಾಡಿಸುತ್ತಾ ಇದ್ದರೂ, ಗಾಡಿಗಳನ್ನಿಡುವ ನೆಪದಲ್ಲಿ Pot ಎಲ್ಲಾ ಪುಡಿ ಪುಡಿಯಾಗುತ್ತಿತ್ತು ಒಮ್ಮೊಮ್ಮೆ ಶ್ರೀಮತಿ ಇದೇನ್ರಿ ಇಂಥಾ ಜನಗಳು. ಒಂದು ಚೂರೂ ಸಭ್ಯತೇನೇ ಇಲ್ಲದ್ಹಂಗೆ ಆಡ್ತಾರೆ ''ಯಾಕೆ ಹಿಂಗ್ಮಾಡ್ತಿರಾಂದ್ರಿ'' ಸಾಕು ಜಗಳವಾಡಿ ರಂಪರಾದ್ಧಾಂತ ಮಾಡ್ತಿದ್ರು. ಆಗೆಲ್ಲಾ ಶ್ರೀಮತಿಗೆ ಈ ಓನರ್ ಮುಂದೆ ನಾವೂ ಒಂದು ದೊಡ್ಡ ಮನೆ ಕಟ್ಸಿ ತೋರಿಸ್ಬೇಕು ಅನ್ನೋ ಮನದಾಸೆ ಮೂಡಿದ್ದೂ ಉಂಟು. ಇದನ್ನೆಲ್ಲಾ ಯಜಮಾನರಿಗೆ ಹೇಳಿದ್ರೆ ''ತಲೇನೇ ಕೆಡಿಸಿಕೊಳ್ಳಬೇಡ. ಆ ದೇವರು ಕಣ್ಣು ಬಿಟ್ರೆ ಎಲ್ಲಾ ಸಲೀಸಾಗೇ ಆಗುತ್ತೆ ಅನ್ತಿದ್ರು.'' ಈ ಮಾತಿನಿಂದ ಉಕ್ಕಿ ಬಂದ ಆಸೆ, ಎಲ್ಲಾ ಒಮ್ಮೆಗೆ ತಣ್ಣಗಾಗಿ ಕಣ್ಣಲ್ಲಿ ನೀರು ಬರುತ್ತಿತ್ತು. ''ಆ ದೇವ್ರು ಕಣ್ಣು ಬಿಡೋ ಹೊತ್ತಿಗೆ ನಾವೇ ಕಣ್ಣು ಕಣ್ಣು ಬೇಡಬೇಕಾಗುತ್ತೆ ಅಷ್ಟೆ'' ಎಂದು ಗೊಣಗಿಕೊಂಡು ಸುಮ್ಮನಾಗುತ್ತಿದ್ದಳು. ಇವೆಲ್ಲಾ ಕನಸೇನೋ ಎಂದುಕೊಳ್ಳುವಷ್ಟರಲ್ಲೆ ಮನೆ ಮುಗಿದಿತ್ತು. ಬಂದು ಹೋಗುವವರ ಹೊಗಳಿಕೆಯೂ ಜಾಸ್ತಿಯಾಗಿತ್ತು.

ಶ್ರೀಮತಿಯೋ ತಾಳ್ಮೆ ಸ್ವಭಾವದವಳು. ''ರೀ ಎಲ್ಲಾ ಅರ್ಜೆಂಟಾಗಿ ತಂದು ಮನೆಗೆ ತುಂಬ ಬೇಡಿ. ಈಗ ಇರೋ ಸಾಮಾನೇ ಸ್ವಲ್ಪ ದಿನ ಅಡ್ಜೆಸ್ಟ್ ಮಾಡ್ಕೊಳ್ಳೋಣ ಆಮೇಲೆ ಒಳ್ಳೇದಕ್ಕೆ ಹೋಗೋಣ. ಮಕ್ಕಳಿನ್ನೂ ಚಿಕ್ಕವರು. ಅವುಗಳು ಗಲೀಜು ಮಾಡೋದು, ಅಷ್ಟು ದುಡ್ಡು ಕೊಟ್ಟು ತಂದ ಅವುಗಳನ್ನು ಆ ರೀತಿಯಲ್ಲಿ ನೀವು ನೋಡೋದು, ಏನೂ ಅರಿಯದ ಆ ಮಕ್ಕಳನ್ನು

ಬೈಯೋದು, ಬೈದವಕ್ಕೆ ನಾನು ನಿಮ್ಮನ್ನು ಬೈಯೋದು ಹೀಗೆ ಬೆಳೀತಾ ಹೋಗುತ್ತೆ ಅದ್ಕೆ ಒಂದು ಸ್ವಲ್ಪ ದಿನ ತಡೀರಿ ಎಂದು ಗಂಡನಿಗೆ ಬುದ್ಧಿ ಹೇಳುವಲ್ಲಿ ಶ್ರೀಮತಿ ಸೋತಳು. ಮನೆಗೆ ತಕ್ಕಂತ ವಸ್ತುಗಳೆಲ್ಲಾ ಬಂದವು ಶ್ರೀಮತಿ ಎಣಿಸಿದಂತೆ ತುಂಟ ಮಕ್ಕಳ ಚೇಷ್ಟೆ ಜಾಸ್ತಿಯಾಯಿತು. ಶಿವರಾಂನ ಆರ್ಭಟ ಹೆಚ್ಚಾಯಿತು. ಶ್ರೀಮತಿ ಈಗೇನ್ಮಾಡ್ಬೇಕು ಮೊದ್ಲೇ ಬಡ್ಕೊಂಡೆ ಈಗ್ಲೆ ಎಲ್ಲಾ ತರ್ಬೇಡೀಂತಾ ಕೇಳ್ರಿ ನನ್ನ ಮಾತು. ಈಗ ಅನುಭವಿಸಿ. ಮಕ್ಕಳನ್ನ ಮಾತ್ರ ಬೈಬೇಡಿ'' ಎಂದಾಗ ಗಂಡನ ಮೂಗಿನ ತುದಿಯ ಕೋಪ ನೆತ್ತಿಗೆ ಹತ್ತಿತ್ತು. ಊರು ಕೇರಿ ಒಂದು ಮಾಡೋಷ್ಟು ಕೂಗಾಡಿ ಹಾರಡಿದ ಇಷ್ಟು ಚಿಕ್ಕ ವಿಷಯಾನ ಇಷ್ಟು ದೊಡ್ಡ Issue ಮಾಡೋಂತ ಪ್ರಮೇಯಾನೇ ಇರ್ಲಿಲ್ಲ ಎಂದು ಗೊಣಗಿಕೊಂಡೇ ಅಡುಗೆ ಮನೆಗೆ ನಡೆದಳು. ಎರಡು ಮೂರಿ ದಿನ ಮಾತು ಬಿಟ್ಟಳು. ರಾಜಿಯಾಗಿ sorry ಕೇಳಿ ಗಂಡನೇ ಬಳಿಗೆ ಬಂದ. ಗಂಡನ ಮೊಗದಲ್ಲಿ ನಗು ನೋಡಿ ಹೆಂಡತಿಗೆ ಮನದಲ್ಲೇ ಖುಷಿ ಮೊಗದಲ್ಲಿ ಮಾತ್ರ ಕೋಪವನ್ನು ತೋರಿಸುತ್ತಿದ್ದಳು.

ಬಿಡಬಾರದೇ ಶಿವರಾಂ ಇಲ್ಲಿಗೇ! ಅದ್ದೇನ್ಹಾಗುತ್ತೆ. ದುಡ್ಡು ಹಾಕಿ ಮನೆ ಕಟ್ಟಿಸಿದವರಲ್ಲವೇ. ಎಲ್ಲಿ ಧೂಳು ಕಸ ಕಂಡರೂ ಸಾಕು ಇಡೀ ಊರಿಗೇ ಕೇಳಿಸೋ ಹಾಗೆ ಹಂಡತೀನ ಕರೆದು ತೋರಿಸುತ್ತಿದ್ದನು. ಇವಳಿಗೋ ಅಯ್ಯೋ ಯಾರು ಕಟ್ಟಿಸಿದ ಮನೇನಾ! ಅದೇ ರೂಮು, ಹಾಲು, ಅಡುಗೆ ಬಚ್ಚಲು ಮನೆ. ಇನ್ನೊಂದು ಸ್ವಲ್ಪ ಅಲಂಕಾರ ಮಾಡಿದ್ದೀರಿ ಅಷ್ಟೆ. ನಮ್ಗೂ ನಮ್ಮ ಮನೇಂತ ಇದೆ. ನೀವು ಹೀಗೇ ಆಡ್ತಿದ್ರೆ ನಮ್ಮ ಮನೆ ಮೇಲೆ ನಾವೇನೇ ಆಸೆ ಕಳ್ಕೊಂಡು ಬಿಡ್ತೀವಿ. ಅಲ್ಲಿವರ್ಗೂ ನಮ್ಗೆ ಅವಕಾಶ ಕೊಡಬೇಡಿ'' ಎಂದು ಗೋಗರೆದಳು.

ಹೀಗೆಲ್ಲಾ ನಡೆದಾಗ ಶ್ರೀಮತಿ ಓನರ್‌ಗೆ ಕೊಡೋ ಬಾಡಿಗೇನೇ ಜಾಸ್ತಿ ಮಾಡಿದ್ರೇನೇ ಆಗ್ತಿತ್ತು. ದಿನಕ್ಕೊಂದು ಕಡೆ ಅಂತ ಚಂದ ಬದಲಾಗೋದನ್ನು ನೋಡಬಹುದಿತ್ತು. ಎಂದಿದ್ರೂ ಬಿಟ್ಟು ಹೋಗೋ ಮನೇಂತ ಅಷ್ಟಾಗಿ ತಲೆ ಕೆಡಿಸಿಕೊಳ್ತಿರಲಿಲ್ಲ. ''ಶಾಂತಿಧಾಮ'' ಎಂದು ಹೆಸರಿಟ್ಟು ದಿನಕ್ಕೆ 10-6 ಜನ ಸಾಲದವರು ಮನೆಮುಂದೆ ಬಂದು ನಿಂತಾಗ ಅದು ಅಶಾಂತಿಧಾಮವಾಗ್ತಿತ್ತು. ಸುಖ ಶಾಂತಿ ನೆಮ್ಮದಿ ಇಲ್ಲದೆ ಮಾನಸಿಕವಾಗಿ ಬಳಲುತ್ತಾ ಸ್ವಂತ ಮನೇಲಿ ಇರೋದಕ್ಕಿಂತ ಇವೆಲ್ಲಾ ಕೋಡೋಂತ ಪುಟ್ಟ ಬಾಡಿಗೆ ಮನೆಯೇ ಲೇಸು ಎನಿಸುತ್ತಿತ್ತು ಒಮ್ಮೊಮ್ಮೆ!

ದ್ರೌಪದಿ ಮದುವೆ ಪ್ರಸಂಗ

– ಪ್ರೇಮಾಭಟ್

ದ್ರೌಪದಿಯಂತಹ ರಣಚಂಡಿ ಹೆಣ್ಣು, ಅತ್ತೆಯಿಂದ ಹಣ್ಣು ಎಂದು ಗುರುತಿಸಿಕೊಂಡಳು. ಎಷ್ಟೋ ಮಂದಿ ಅತ್ತೆಯರ ಬಾಯಿಯಿಂದ ಹೆಣ್ಣು ಹಣ್ಣಾಗುವುದಿಲ್ಲ ಹುಣ್ಣಾಗುತ್ತಾಳೆ. ಇನ್ನೆಷ್ಟೊ ಸೊಸೆಯರ ಬಾಯಲ್ಲಿ ಅತ್ತೆ ಎಂಬ ಮುದುಕಿ ಬಾಳಿನ ಹುಣ್ಣಾಗುತ್ತಾಳೆ. ಪರಿಸ್ಥಿತಿ ಹೀಗಿರುವಾಗ ಕುಂತಿಗೆ ದ್ರೌಪದಿ ಸಿಹಿಯಾದ ಮಧುರವಾದ ಹಣ್ಣಾದಳು. ಬದುಕಿನ ಸಾರ್ಥಕತೆ ಅಡಗಿರುವುದು ಹೆಣ್ಣು ಹುಣ್ಣಾಗದೆ ಹಣ್ಣಾಗುವುದರಲ್ಲಿ ಹಣ್ಣು ಎಂದರೆ ಎಲ್ಲರಿಗೂ ಬೇಕು, ಹಂಚಿ ತಿನ್ನಬೇಕು. ಬದುಕಿನಲ್ಲಿ ಹೆಣ್ಣು ಸಮರಸವಾಗಬೇಕು. ದ್ರೌಪದಿಯ ಬದುಕಿನಲ್ಲಿ ಒಂದಿಷ್ಟು ವೈಪರಿತ್ಯ. ಅವಳು ಗಂಡರೈವರಿಗೆ ಹಂಚಿಹೋದ ದಿಟ್ಟೆ. ದ್ರೌಪದಿ ರಣಚಂಡಿ ಇರಬಹುದು. ಆದರೆ ಅವಳ ಮನಸ್ಸು ಸಿಹಿಮಧುರ ಹಣ್ಣಿನಂತೆ ಸುಂದರ. ಅವಳಂತಹ ಮೃದು ಮಧುರ ಭಾವದ ಹೆಣ್ಣು ಜಗತ್ತಿನಲ್ಲಿ ಸಿಗುವುದು ದುರ್ಲಭ. ಅಶ್ವತ್ಥಾಮನಿಂದ ಹತರಾದ ತನ್ನ ಐವರು ಮಕ್ಕಳನ್ನು ನೋಡಿಯೂ ಬ್ರಾಹ್ಮಣ ಕುಮಾರನನ್ನು ಕ್ಷಮಿಸಿದ ಮಹಾತಾಯಿ ಅವಳು. ಇಂಥ ಹೆಣ್ಣನ್ನು ಹಣ್ಣು ಎಂದು ನಾಮಾಂಕಿತ ಕೊಟ್ಟದ್ದು, ಗೌರವಿಸಿದ್ದು ಆ ತಾಯಿ ಸರಿಯೆ. ತಾಯಿಯ ಮಾತಿಗೆ ಮಹತ್ವ ಕೊಟ್ಟ ಪಾಂಡವರು ದ್ರೌಪದಿಯನ್ನು ಹಂಚಿಕೊಂಡರು. ಇಲ್ಲೊಂದು ಸಣ್ಣ ಅನುಮಾನ.

ರಣಚಂಡಿ ದ್ರೌಪದಿಯನ್ನು ಒಬ್ಬ ಮಗನಿಂದ ಸುಧಾರಿಸಲು ಸಾಧ್ಯವಿಲ್ಲ ಎಂದು ಅನಿಸಿರಬೇಕು ಕುಂತಿಗೆ. ಅಲ್ಲದೆ ತನ್ನ ಮಕ್ಕಳ ಸ್ವಭಾವ ಜನರ ಗುಣವನ್ನು ಕಂಡಿದ್ದಾಳೆ ಆ ತಾಯಿ. ಬಾಣ ವಿದ್ಯೆಯಲ್ಲಿ ಪ್ರವೀಣನಾದ ಅರ್ಜುನ ಸದಾ ತನ್ನ ಪ್ರತಿಷ್ಠೆ ಮೆರೆಸುವಾಗ, ಅವನಿಗೆಲ್ಲಿದೆ ದ್ರೌಪದಿಯೊಂದಿಗೆ ಸುಖಿಸಲು ಸಮಯ. ಭೀಮಾಕಾಯದ ಭೀಮನ ಜೊತೆಯಲ್ಲಿ ವರ್ಷಪೂರ್ತಿ ದ್ರೌಪದಿ ಸಂಸಾರ ಮಾಡಿದರೆ ಅವಳ ಸ್ಥಿತಿ ಏನಾಗಬಹುದು ಎನ್ನುವ ಹಿತ ಚಿಂತನೆಯೂ ಇದ್ದಿರಬಹುದು. ಸದಾ ಧರ್ಮದ ಚೌಕಟ್ಟಿನೊಳಗೆ ಬದುಕುವ ಧರ್ಮರಾಯ ಅಗತ್ಯಕ್ಕಿಂತ ಹೆಚ್ಚು ಸುಖ ಕೊಡಲಾರ. ಇನ್ನು ಹಸುಗೂಸಿನಂತಹ ಸ್ವಭಾವದ ನಕುಲ ಸಹದೇವರು ಲೆಕ್ಕಕ್ಕಷ್ಟೆ. ಇವರಿಗೆಲ್ಲ ಮೂಗುದಾರ ಹಾಕಲು ದ್ರೌಪದಿಯೇ ಸರಿ ಎಂದು ಆ ತಾಯಿ ಯೋಚಿಸಿರಬಹುದು. ತಾಯ್ತನ ಎನ್ನುವುದು ಅಷ್ಟು ಜಾಗೃತವಲ್ಲವೆ? ಸದಾ ತನ್ನ ಮಕ್ಕಳ ಸುಖವನ್ನೇ ಬಯಸುವ ಎಲ್ಲಾ ತಾಯಂದಿರಂತೆ ಅವಳೂ ಅಲ್ಲವೆ? ಅದಕ್ಕೆ ಅವಳು ದಿವ್ಯ ದೃಷ್ಟಿಯಿಂದ

ದ್ರೌಪದಿಯನ್ನು ಗೆದ್ದು ಬಂದ ಅರ್ಜುನನಿಗೆ ಹಣ್ಣು ತಂದಿದ್ದೀಯಲ್ಲವೇ ಹಂಚಿಕೊಳ್ಳಿ ಎಂದುಬಿಟ್ಟಳು. ಇದರಲ್ಲಿ ಸ್ವಲ್ಪ ಮಟ್ಟಿಗೆ ಕುಂತಿಯ ಸ್ವಾರ್ಥವೂ ಸೇರಿಕೊಂಡಿರಬಹುದು. ಒಬ್ಬ ಸೊಸೆಯನ್ನು ಸುಧಾರಿಸಿಕೊಂಡು ಹೋಗುವುದೇ ಕಷ್ಟ. ಇನ್ನು ಐದು ಮಂದಿ ಗಂಡು ಮಕ್ಕಳಿಗೆ ಐದು ಜನ ಸೊಸೆಯರನ್ನು ತಂದರೆ ಅವರನ್ನು ಸುಧಾರಿಸುವವರು ಯಾರು? ಅವಳ ಮೇಲೆ ಇವಳು, ಇವಳ ಮೇಲೆ ಅವಳು ಹೇಳುತ್ತ, ಒಬ್ಬರ ಮೇಲೆ ಒಬ್ಬರು ಕತ್ತಿ ಮಸೆದರೆ ನೋಡಿಕೊಂಡು ಸುಮ್ಮನಿರಲು ಸಾಧ್ಯವೇ? ಇಂಥ ಪ್ರಸಂಗ ಬಂದರೆ ತನ್ನಿಂದ ಸುಧಾರಿಸಲು ಸಾಧ್ಯವೆ? ಈ ಗೋಳು ಯಾರಿಗೆ ಬೇಕು ಎಂದೆಲ್ಲ ಯೋಚಿಸಬಹುದು ಆ ತಾಯಿ. ದಿಢೀರನೆ ಅರ್ಜುನ ಗೆದ್ದುತಂದ ದ್ರೌಪದಿಯನ್ನು ಎಲ್ಲರೂ ಹಂಚಿಕೊಳ್ಳಿ ಎಂದುಬಿಟ್ಟಳು. ಅವ್ವ ಅಂದಳು ಎಂದು ಎರಡು ಮಾತಿಲ್ಲದೆ, ತುಟಿ ಬಿಚ್ಚದೆ ಕಗ್ಗಂಟಾದ ಕರಿಮಣಿ ಸರವನ್ನು ದ್ರೌಪದಿಯ ಕೊರಳಿಗೆ ಬಿಗಿದೆಬಿಟ್ಟರು ಐವರೂ. ಮುಂದೆ ದ್ರೌಪದಿಯಿಂದ ಗಂಡರೈವರಿದ್ದು ಷಂಡರು ಎಂದು ಬೈಸಿಕೊಳ್ಳಲು.



ಅಮೆರಿಕಾದಿಂದ ಬಂದಿರೋ ಮಗಳೂ ಅಳಿಯನ್ನ ನೋಡುಕ್ಕ
ಹೋಗ್ಲಿಲ್ಲಾಂತ ಅವಳಿಗೆ ನನ್ನ ಮೇಲೆ ಕೋಪ. ಇದ್ಯಾವ ನ್ಯಾಯಾ ರೀ.

ಗುಗ್ಗುಡಿ ಕೈಗಾರಿಕೆ

– ಬಿ. ಆರ್. ನಾಗೇಶ್

ಸರಕಾರದ ಆರ್ಥಿಕ ಉದಾರೀಕರಣದಿಂದ ದೇಶದ ಪ್ರಾಚೀನ ಸಂಸ್ಕೃತಿಗೆ ಧಕ್ಕೆ ಉಂಟಾಗಿದೆ ಎಂದು ಸ್ವಯಂ ಘೋಷಿತ ಉದ್ಗಾರದಿಂದ ಇಬ್ಬರು ಸೆಂಟ್ ಪರ್ಸೆಂಟ್ ದೇಶಾಭಿಮಾನಿಗಳು ಹುಟ್ಟು ಹಾಕಿದ ಸಂಸ್ಥೆಯೇ ಗುಗ್ಗುಡಿ ಕೈಗಾರಿಕೆ.

ಶುದ್ಧವಾದ ಗುಡಿ ಕೈಗಾರಿಕೆಗೆ ಗುಗ್ಗುಡಿ ಕೈಗಾರಿಕೆ ಎಂದು ಅವರು ಹೆಸರಿಸಿದ್ದಕ್ಕೆ ವಿಶಿಷ್ಟವಾದ ಅರ್ಥವಿದೆ. ಗುಡಿ+ಗುಡಿ ಕೈಗಾರಿಕೆ = ಗುಗ್ಗುಡಿ ಕೈಗಾರಿಕೆ. ತಮ್ಮ ಕೈಗಾರಿಕೆ ಎಷ್ಟು ಪರಿಶುದ್ಧವೆಂದರೆ, ಗುಡಿ ಎಂಬ ಶಬ್ದವನ್ನು ಎರಡು ಬಾರಿ ಉಪಯೋಗಿಸುವಷ್ಟು ಎಂಬ ಸಿದ್ಧಾಂತ ಅವರದ್ದು.

ತಾವು ತಯಾರಿಸಿದ ವಸ್ತುಗಳು ಶುದ್ಧ ಭಾರತೀಯವೇ ಆಗಬೇಕು; ಪಾಶ್ಚಾತ್ಯ ಕಂಪೆನಿಗಳ ಯಾವ ಆರ್ಥಿಕ ನೆರವಾಗಲಿ, ತಾಂತ್ರಿಕ ನೆರವಾಗಲಿ ತಮಗೆ ಸಿಗಬಾರದು ಅಥವಾ ಸಿಗಲಾರದು; ಮುಖ್ಯವಾಗಿ ಈ ಕೈಗಾರಿಕಾ ನೀತಿಯಿಂದ ರೂಪುಗೊಂಡ ವಸ್ತುವಿಗೆ ನಮ್ಮ ದೇಶದಲ್ಲಿಯೇ ಮಾರುಕಟ್ಟೆ ಸಿಗಬೇಕು; ಆ ಕೈಗಾರಿಕೆಯಿಂದ ಸಮಾಜದ ಸ್ವಾಸ್ಥ್ಯ ಉಳಿಯಬೇಕು; ಹೆಚ್ಚು ಕಡಿಮೆ 5124 ರಾಜಕೀಯ ಪಕ್ಷಗಳಿರುವ ಈ ದೇಶ ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ತನ್ನದೇ ಆದ ಗೌರವ, ಜನಮನ್ನಣೆ ಇದೆ ಎಂಬುದನ್ನು ತೋರುವಂಥಾಗಬೇಕು - ಎಂಬಿತ್ಯಾದಿ ಉದಾರ ಉದ್ದೇಶಗಳಿಂದ ಪ್ರಾರಂಭವಾದ ಸಂಸ್ಥೆ ಇದು.

ಇವರ ಧ್ಯೇಯ ವಾಕ್ಯ ಹೀಗಿದೆ: ಪ್ರಜಾಪ್ರಭುತ್ವವನ್ನು ಉಳಿಸಿ ಬೆಳೆಸಬೇಕಾದರೆ ಬೇಕಾಗುವುದು ಕೈ-ಗಂಟಲುಗಳ ಬಲವೇ ಹೊರತು ಬುದ್ಧಿಯದಲ್ಲ'' ಇದಕ್ಕಾಗಿ ಇವರು ತುಳಿದ ಹಾದಿ ಸಮತಾವಾದದ ತಳಹದಿಯಿಂದ ಮೇಲಕ್ಕೆದ್ದದ್ದು.

ಇವರ ಅಂಗಡಿಯನ್ನು ನೋಡಬೇಕಾದರೆ ಭಾರತದ ಸಾಧಾರಣ ಪ್ರಜೆ ಪುಣ್ಯ ಮಾಡಿರಬೇಕು. ನಮ್ಮ ದೇಶದ ಅತಿ ಪ್ರಾಚೀನ ಕಾಲದ ಗುಡಿಯ ಆಕಾರದ ಒಂದು ರಚನೆ - ಹೊರಗಿನಿಂದ, ದೂರದಿಂದ ನೋಡುವಾಗ ವಸ್ತು ಸಂಗ್ರಹಾಲಯದಿಂದ ಕದ್ದು ತಂದಿರುವ ಒಂದು ಗುಡಿಯಂತೆ ಕಾಣಿಸುತ್ತದೆ. ಅದರ ನಿರ್ಮಾಣ ಸಿಮೆಂಟು ಕಲ್ಲುಗಳಿಂದಾದರೂ, ಗೋಡೆಗಳಿಗೆ ಸಾರಿಸಿದ್ದು ಗೋಮಯವನ್ನು; ಮಾಡು ಕಾಂಕ್ರಿಟಿದ್ದರೂ ಅದರ ಮೇಲಿನ ಹೊದಿಕೆ

ಮಲ್ಲಿನದು. ಬಾಗಿಲು ಯಾವಾಗಲೂ ತೆರೆದೇ ಇರುವಂಥ ಎದೆಗಾರಿಕೆ ಆ ಗುಡಿಗೆ. ರಾಮರಾಜ್ಯದ ನೆನಪು ಇದನ್ನು ನೋಡಿದ ಯಾರಿಗಾದರೂ ಬರಬಹುದು.

ಒಳಗಡೆ ಅಚ್ಚುಕಟ್ಟಾಗಿ ಜೋಡಿಸಿಟ್ಟಿರುವ ವಸ್ತುಗಳು ಬೇರೆ ಬೇರೆ ಪಾಲಿಥಿನ್ ಚೀಲಗಳಲ್ಲಿ. ಈ ಚೀಲಗಳಲ್ಲದೆ ಗೋಡೆ ತುಂಬಾ ಗರಿಗರಿಯಾದ ಪ್ಲಾಸ್ಟಿಕ್ ಪತಾಕಗಳು - ಬೇರೆ ಬೇರೆ ರಾಜಕೀಯ ಪಕ್ಷಕ್ಕೆ ಸೇರಿದವುಗಳು. ಹಾಗೆಯೇ ಸಾವಿರಾರು ರಾಜಕೀಯ ಮುಖಂಡರ ಚಿತ್ರಗಳು. ದೇಶಿಯವಾಗಿ ರೂಪುಗೊಂಡಿರುವ ಈ ಕೈಗಾರಿಕಾ ಘಟಕದೊಳಗೆ ನಾವು ಕಾಲಿಟ್ಟೊಡನೆಯೆ ನಮಗೆದುರಾಗುವವರು ಇಬ್ಬರು ನವ ಯುವಕರು. ಅವರು ಶುದ್ಧ ದೇಶಿ ಶೈಲಿಯಲ್ಲಿ ಬಟ್ಟೆ ಬರೆ ತೊಟ್ಟಿರುತ್ತಾರೆ. ಕಚ್ಚೆ ಹಾಕಿ ಧರಿಸಿದ ಪಂಚೆ, ದೊಡ್ಡ ಚೋಳಿಗೆಯಂಥ ಅಂಗಿ, ಅದರ ಮೇಲೊಂದು ಒಳಕೋಟು, ಒಳಕೋಟಿನ ಮೇಲೊಂದು ಮೆರೆಯುವ ಜಾವಾದ ದಾಸವಾಳ ಹೂ.

''ಬನ್ನಿ ಬನ್ನಿ, ಸ್ವಾಗತ. ನೀವು ಇದೇ ದೇಶದವರಾದುದರಿಂದ, ದೇಶಭಕ್ತರಾಗಿರುವುದರಿಂದ, ಪರಕೀಯ ದೇಶದ ಯಾವ ವಸ್ತುಗಳನ್ನು ಉಪಯೋಗಿಸದೆ ಇರುವ ದೃಢ ಸಂಕಲ್ಪ ಮಾಡಿದವರಾದುದರಿಂದ, ಇಲ್ಲಿಗೆ ಬಂದಿರುವಿರಿ ಎಂದು ತಿಳಿಯುತ್ತೇವೆ. ಇಲ್ಲಿ ಮಾರಾಟಕ್ಕಿರುವ ಎಲ್ಲಾ ವಸ್ತುಗಳು ಶುದ್ಧವಾದ ರೀತಿಯಲ್ಲಿ, ಈ ದೇಶದಲ್ಲಿಯೇ ತಯಾರಾದವುಗಳು. ಇವುಗಳ ಉಪಯೋಗವೂ ಈ ದೇಶದಲ್ಲಿಯೇ ಆಗಬೇಕು ಎಂಬ ಮಹದಿಚ್ಛೆ ನಮ್ಮದು. ಈಗ ನೋಡಿ - ಇಲ್ಲಿರುವ ವಸ್ತುಗಳನ್ನು ನಾವು ದೇಶದ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಬಳಸುವ ವಸ್ತುಗಳೇ ಇವುಗಳು. ಇಂಥಾ ವಸ್ತುಗಳು ಇದ್ದುದರಿಂದಲೇ ನಮ್ಮ ದೇಶದ ಪ್ರಜಾಪ್ರಭುತ್ವ ಸ್ವರ್ಣ ಜಯಂತಿಯನ್ನು ಆಚರಿಸಿರುತ್ತದೆ'' ಎಂದು ಉತ್ಸಾಹದಿಂದ ನುಡಿದು, ಅಲ್ಲಿಯೆ ಬದಿಯಲ್ಲಿ ಉರಿಯುತ್ತಿರುವ ಇದ್ದಲ ಒಲೆಯ ಮೇಲಿನ ಪಾತ್ರೆಯಿಂದ ಒಂದು ಲೋಟ ಕೊತ್ತಂಬರಿ ಕಷಾಯ ಬಗ್ಗಿಸಿಕೊಟ್ಟರು. ನಾವದನ್ನು ಕುಡಿಯಲೇಬೇಕಾಯಿತು - ಇಲ್ಲವಾದರೆ ನಮ್ಮ ದೇಶಭಕ್ತಿ ತೂತು ಬಿದ್ದ ಕೊಡೆಯಾದೀತು. ಕುಡಿದೆವು.

''ನಿಮಗೇನು ಬೇಕು ಹೇಳಿ''

''ಸಧ್ಯ ಏನೂ ಬೇಕಾಗಿಲ್ಲ. ಮುಂದೊಂದು ದಿನ, ಇಲ್ಲಿ ಸಿಕ್ಕುವ ಯಾವುದಾದರೂ ವಸ್ತು ಉಪಯೋಗಕ್ಕೆ ಬೀಳುವುದಾದರೆ, ಅದರ ಪೂರ್ವ ಪರಿಚಿತ ಇರಲಿ - ಎಂದು ಅವುಗಳನ್ನು ನೋಡಲು ಬಂದೆವು'' ಎಂದೆವು ನಾವು.

''ಪ್ರಜಾಪ್ರಭುತ್ವಕ್ಕೆ ಮುಖ್ಯವಾಗಿ ಬೇಕಾಗುವುದು ನಿಮ್ಮಂಥವರ ದಿವ್ಯದೃಷ್ಟಿ - ಭವಿಷ್ಯ ದೃಷ್ಟಿ, ಸಂತೋಷ. ಈಗ ಒಂದೊಂದೇ ವಸ್ತುಗಳನ್ನು ನಿಮಗೆ ತೋರಿಸುತ್ತೇವೆ. ನಿಮಗೆ ಮುಂದಕ್ಕೆ ಬೇಕಾಗಬಹುದಾದವುಗಳನ್ನು ಗುರುತಿಸಿಕೊಳ್ಳಿ. ನೋಡಿ, ಈ ಪ್ಲಾಸ್ಟಿಕ್ ಚೀಲದಲ್ಲಿ ಸಣ್ಣ ಸೈಜಿನ ಜಲ್ಲಿಕಲ್ಲುಗಳಿವೆ. ಇವುಗಳನ್ನು ಸಣ್ಣ ಮಕ್ಕಳು ಕೂಡಾ ಉಪಯೋಗಿಸಬಹುದು. ಮುಖ್ಯವಾಗಿ, ಕಾರುಗಳ ಮುಂಭಾಗದ ಮತ್ತು ಹಿಂಭಾಗದ ಗಾಜುಗಳನ್ನು ಒಡೆಯಲು, ಮನೆಗಳ ಕಿಟಿಕಿ ಬಾಗಿಲುಗಳ ಗಾಜು ಒಡೆಯಲು, ಸಣ್ಣ ಸಣ್ಣ ಅಂಗಡಿಗಳಲ್ಲಿ ಮುರುಕಾಗಿ ಬಿದ್ದಿರುವ ಕಬಾಟುಗಳ ಗಾಜು ಒಡೆಯಲು - ಇವುಗಳು ಬಹಳ ಅನುಕೂಲಕಾರಿ. ಇವುಗಳನ್ನು ಚಿಕ್ಕ ಚಿಕ್ಕ ಚೀಲದಲ್ಲಿ ತುಂಬಿ ಇಟ್ಟಿರುತ್ತೇವೆ; ಕಾರಣ ಯಾರ ಪ್ಯಾಂಟಿನ ಕಿಸೆಯಲ್ಲಿಯೂ ಇದನ್ನು ಇಟ್ಟುಕೊಳ್ಳಬಹುದು. ಒಂದು ಚೀಲದಲ್ಲಿ ಅರ್ಧ ಕಿಲೋ ಜಲ್ಲಿ ಇದೆ. ಒಳ್ಳೆಯ ಜಾತಿಯ ಜಲ್ಲಿ.''

ನಮಗೆ ಸಂತೋಷವಾಯಿತು. ಸ್ವಲ್ಪ ಮುಂದುವರಿದಾಗ ಇನ್ನೊಂದು ಉತ್ಪತ್ತಿ ಕಣ್ಣಿಗೆ ಬಿತ್ತು.

''ಇದು ನೋಡಿ, ದೊಡ್ಡ ಸೈಜಿನ ಕಲ್ಲು, ದೊಡ್ಡ ದೊಡ್ಡ ಕಟ್ಟೋಣಗಳ ಗಾಜನ್ನು ಒಡೆಯುವುದಕ್ಕೆ, ಸರಕಾರಿ ಬಸ್‌ಗಳ ಗಾಜು ಒಡೆಯುವುದಕ್ಕೆ, ಲೋರಿಗಳ ಗಾಜು ಒಡೆಯುವುದಕ್ಕೆ ಬಹಳ ಉಪಕಾರಿ. ಇದು ಬರುವುದು ಎರಡೆರಡು ಕೆ.ಜಿ. ತೂಕದ ಚೀಲದಲ್ಲಿ. ಚಿಲ್ಲರೆಯಾಗಿಯೂ ಕೊಡಬಹುದು, ಚಿಲ್ಲರೆಯಾಗಿ ಕೊಡುವುದಾದರೆ ಒಂದು ಜಲ್ಲಿ ಕಲ್ಲಿಗೆ ಒಂದೂವರೆ ರೂಪಾಯಿ ಬೀಳುತ್ತದೆ. ಈ ಜಲ್ಲಿಯ ಎರಡೂ ಬದಿಗಳನ್ನು ಚೂಪಾಗಿ ರೂಪುಗೊಳಿಸಲಾಗಿದೆ. ಹಾಗಾಗಿ ಇದರ ಎಸೆತ ಯಾವಾಗಲೂ ವ್ಯರ್ಥವಾಗುವುದಿಲ್ಲ. ಸರಕಾರಿ ಬಸ್ ಧ್ವಂಸ ಮಾಡಲು ಏವನ್ ವಸ್ತು ಇದು.''

ಒಂದು ಪ್ಲಾಸ್ಟಿಕ್ ಚೀಲ ಎತ್ತಿ ನಮ್ಮ ಕೈಗೆ ಕೊಟ್ಟರು. ಒಳಗಿರುವ ಜಲ್ಲಿಯ ಆಕಾರವನ್ನು ಕಂಡೇ ನಮಗೆ ಈ ದೇಶದ ಮೇಲೆ ಡಬ್ಬಲ್ ಪ್ರೀತಿ ಹುಟ್ಟಿತು. ಮುಂದಕ್ಕೆ ಹೋದಂತೆ.

''ಇದು ನೋಡಿ, ದೊಡ್ಡ ದೊಡ್ಡ ಬಂಡೆ ತುಂಡುಗಳು ರಸ್ತೆ ತಡೆಗೆ ಬಹಳ ಉಪಯುಕ್ತ. ಹಾಗೆಯೇ ಎದುರು ಪಾರ್ಟಿಯವರ ತಲೆಬುರುಡೆ ಒಡೆಯಲೂ ಅತ್ಯಂತ ಉಪಕಾರಿ ವಸ್ತು. ಸ್ವಲ್ಪ ಭಾರ ಇದೆ. ಆದರೆ ಭಾರದಷ್ಟೆ ಇದರ ಉಪಯೋಗ ಇದೆ.''

ಮಹಾಭಾರತದ ಭೀಮನ ಕೈಯಲ್ಲಿ ಇಂಥ ಕಲ್ಲೊಂದು ಇದ್ದಿದ್ದರೆ, ಇಡೀ ಕುರುಕ್ಷೇತ್ರ ಯುದ್ಧ ಒಂದೇ ದಿನದಲ್ಲಿ ಮುಗಿದು ಹೋಗುತ್ತಿತ್ತು ಎಂದು ನನಗಾಗ ಅನಿಸಿದ್ದು ಸುಳ್ಳೇನಲ್ಲ.

''ನೋಡಿ, ಇವುಗಳು ಬೇರೆ ಬೇರೆ ಸೈಜಿನ ಟಯರ್‌ಗಳು. ರಸ್ತೆಯ ಮಧ್ಯದಲ್ಲಿ ಇವುಗಳನ್ನು ಪೇರಿಸಿಟ್ಟು ಬೆಂಕಿ ಹಚ್ಚಿಬಿಟ್ಟರೆ, ಯಾವ ಪತಿವ್ರತೆಯೂ ಇದನ್ನು ದಾಟುವ ಹಾಗಿಲ್ಲ; ಯಾವ ಸತಿ ವ್ರತನು ಕೂಡಾ. ಇದರ ಬೆಂಕಿಗೆ ಅದ್ಭುತ ಶಕ್ತಿ ಮತ್ತು ಅದಕ್ಕಿಂತ ಅದ್ಭುತವಾದ ವಾಸನೆ ಇದೆ. ಇಂಥಾ ವಾಸನೆ ಬರಬೇಕೆಂದು ಇವುಗಳ ಮೇಲೆ ಬೇರೆ ಬೇರೆ ಮೂಲಿಕೆಗಳನ್ನು ಹಚ್ಚಿದ್ದೇವೆ. ಒಂದನ್ನು ಉರಿಸಿ ತೋರಿಸಲಾ?''

''ಬೇಡಪ್ಪಾ, ಸಧ್ಯ ನೋಡಿಯಾಯಿತಲ್ಲಾ. ಇದನ್ನು ಉರಿಸಿ ನಿಮಗೆ ನಷ್ಟವಾಗುವುದು ಬೇಡ.''

''ಒಂದು ಸಣ್ಣ ಟಯರ್, ಸ್ಕೂಟರಿದ್ದು - ಹತ್ತಿ ಹೋದರೆ ನಮಗೇನು ನಷ್ಟ ಆಗುವುದಿಲ್ಲ. ಮಾತ್ರವಲ್ಲ - ಇಲ್ಲಿಯ ನುಸಿಕಾಟಕ್ಕೂ ಅದು ಒಳ್ಳೆಯ ಮದ್ದು.''

''ನುಸಿಕಾಟಕ್ಕೆ ಜಲ್ಲಿ ಕಲ್ಲನ್ನು ನೀವು ಯಾಕೆ ಉಪಯೋಗಿಸಬಾರದು?'' ಎಂಬ ನಮ್ಮ ಪ್ರಶ್ನೆಗೆ, ಆ ದೇಶಭಕ್ತರ ನಗುವೇ ಉತ್ತರವಾಯಿತು.

''ಇನ್ನು ಮುಂದೆ ನಿಮಗೆ ತೋರಿಸುವ ವಸ್ತುವನ್ನು ಬಿಡಿ ಬಿಡಿಯಾಗಿ ಕೊಡುವುದಿಲ್ಲ. ಬಾವುಟ ಮತ್ತು ನಾಯಕನ ಚಿತ್ರವನ್ನು ಒಟ್ಟಾಗಿ ಖರೀದಿಸಬೇಕು. ಒಂದು ಬಾವುಟ ಮತ್ತು ಒಂದು ನಾಯಕನ ಚಿತ್ರಕ್ಕೆ ಒಟ್ಟು ನೂರ ಐವತ್ತು ರೂಪಾಯಿ. ಯಾವ ರಾಜಕೀಯ ಪಕ್ಷವನ್ನು ನೀವು ಬೆಂಬಲಿಸುತ್ತಿರೋ, ಆ ಪಕ್ಷದ ನಾಯಕನ ಚಿತ್ರವನ್ನು ನಿಮ್ಮ ಮನೆಯ ಎದುರು, ವಾಹನದ ಮೇಲೆ, ಕಾರಿನ ಮೇಲೆ, ಬಸ್ಸಿನ ಮೇಲೆ, ಲಾರಿಯ ಮೇಲೆ ಅಂಟಿಸಿ, ಪಕ್ಕದಲ್ಲಿಯೇ ಆಯಾ ಪಕ್ಷದ ಬಾವುಟವನ್ನು ಕಟ್ಟಿಬಿಟ್ಟರೆ, ನಿಮ್ಮ ಎಲ್ಲಾ ವಸ್ತುಗಳೂ ಸುರಕ್ಷಿತ - ಮಿದುಳು ಕೂಡಾ. ನಾಯಕ-ಬಾವುಟಗಳ ಜಂಟಿ ದರ್ಶನದ ಮೇಲೆ ಯಾವ ರೀತಿಯ ಧಾಳಿಯೂ ನಡೆಯುವುದಿಲ್ಲ - ಧಾಳಿ ಪ್ರೂಫ್ ಇದು - ನಿರೋಧದ ಹಾಗೆ. ಇದರ ಪರಿಣಾಮಕ್ಕೆ ನಾವು ನೂರಕ್ಕೆ ನೂರು ಗ್ಯಾರಂಟಿ ಕೊಡುತ್ತೇವೆ'' ಎಂದು ಹೆಮ್ಮೆಯಿಂದ ಹೇಳಿದರು.

''ಸರಿ, ಮುಂದಕ್ಕೆ, ಅಲ್ಲಿ ಉರುಟುರುಟು ಏನೋ ಇದೆಯಲ್ಲಾ - ಏನದು?'' ಎಂದು ನಾವು ಕೇಳಿದೆವು.

''ಬಾಂಬುಗಳು. ಹೆದರಬೇಕಾಗಿಲ್ಲ. ಇದು ಆಸ್ಫೋಟಗೊಂಡಾಗ ಭಯಂಕರ ಎದೆ ನಡುಗಿಸುವ ಶಬ್ಧ ಉಂಟಾಗುತ್ತದೆ. ಆದರೆ ಯಾರಿಗೂ ಏನೂ ಹಾನಿ ಆಗುವುದಿಲ್ಲ. ಇದರ ಮೇಲೆ ಯಾರು ಕೂತರೂ ಏನೂ ಆಗುವುದಿಲ್ಲ. ಅಷ್ಟು ಸೇಫ್. ಬ್ಯಾಂಕಿನ ಒಳಗೆ, ಬಸ್ ಸ್ಟಾಂಡಿನಲ್ಲಿ, ರೈಲ್ವೆ ಸ್ಟೇಷನ್ನಿನಲ್ಲಿ, ಮಕ್ಕಳಿಗೆ ರಜೆ ಬೇಕೆಂದಾಗ ಶಾಲಾಕಾಲೇಜುಗಳಲ್ಲಿ ಉಪಯೋಗಿಸಬಹುದು. ಯಾವುದಾದರೂ ಲೆಕ್ಚರರ ಮೇಲೆ ಹಗೆ ಇದ್ದರೆ, ಅವರ ಮನೆ ಕಾಂಪೌಂಡಿನಲ್ಲಿಯೂ ಇಡಬಹುದು. ದುರಡಳ ರಾಜಕೀಯ ಪಟುವಿನ ಕಾರಿನ ಅಡಿಯಲ್ಲಿಯೂ ಇಡಬಹುದು. ಅದಕ್ಕಾಗಿ ಇದಕ್ಕೆ ಬಹುಮುಖಿ ಅಗ್ನಿ ಎಂದು ಹೆಸರು ಇಟ್ಟಿದ್ದೇವೆ'' ಎಂದರು ಎದೆಯ ಮೇಲೆ ಕೈ ಇಟ್ಟುಕೊಂಡು.

ಸ್ವಲ್ಪ ಮುಂದೆ ಸುಮಾರು ಮೂರು ಅಡಿಗಳಷ್ಟು ಉದ್ದದ ಕೋಲುಗಳಿದ್ದವು. ಕೆಲವು ಸಾದಾ ಸೀದಾ ಕೋಲುಗಳು; ಕೆಲವಕ್ಕೆ ಬೆಳ್ಳಿ ಕಟ್ಟಡಗಳಿದ್ದವು.

''ದೊಂಬಿ ಗಲಾಟೆಯ ಸಮಯ, ವಾಹನಗಳನ್ನು ತಡೆದು ನಿಲ್ಲಿಸಲು ಉಪಯೋಗಿಸಬಲ್ಲ ಹತ್ಯಾರುಗಳು. ಬೆಳ್ಳಿ ಕಟ್ಟದ ಕೋಲುಗಳು ಮುಖಂಡರಿಗೆ ಮಾತ್ರ'' ಎಂದರು.

ಇಷ್ಟರಲ್ಲಿ ನಮಗೆ ಸಾಕು ಬೇಕಾಗಿತ್ತು. ಇವಿಷ್ಟು ವಿಧದ ಹತ್ಯಾರುಗಳನ್ನು ಕಂಡ ಬಳಿಕ ಬಾಯಾರಿಕೆ ಆಗದೆ ಇರುತ್ತದೆಯೆ? ನಮ್ಮ ಬಾಯಾರಿಕೆಯನ್ನು ತಿಳಿದವರಂತೆ, ಕೂಡಲೇ ನಮಗೆ ಕೆಂಪು ಬಣ್ಣದ ಶರಬತ್ ಬಂತು. ಕುಡಿದಾಗ ಹೊಟ್ಟೆ ತಣ್ಣಗಾಯಿತು.

''ನಮ್ಮ ಸಂಸ್ಕೃತಿಯ ಉತ್ಪಾದನೆ ಇದು, ಇದನ್ನು ಬಿಟ್ಟು ಅಮೇರಿಕಾದಿಂದ ಬರುವ ಬಣ್ಣದ ನೀರನ್ನು ಕುಡಿಯುತ್ತೇವಲ್ಲಾ! ನಮ್ಮಂಥ ದೇಶದ್ರೋಹಿಗಳು ಬೇರೆ ಯಾರಿದ್ದಾರೆ?''

ಅವರೆಲ್ಲಾ ವಾದಗಳು ಅರ್ಥಪೂರ್ಣ, ಸಾಂಸ್ಕೃತಿಕ ಎಂದು ನಮಗೆ ಗೊತ್ತಾದರೂ, ಕೆಲವು ಸಂದೇಹಗಳು ಹಾಗೆಯೆ ಉಳಿದವು.

''ಈ ವಸ್ತುಗಳನ್ನೆಲ್ಲಾ ಎಲ್ಲಿ ಯಾವಾಗ ಉಪಯೋಗಿಸಲು ಬರುತ್ತದೆ? ದಯವಿಟ್ಟು ನಮ್ಮ ಸಂಶಯ ನಿವಾರಣೆ ಮಾಡಿ'' ಎಂದು ಅರ್ಜುನೀಯ ಸ್ವರದಲ್ಲಿ ಕೇಳಿದೆವು.

''ಅಯ್ಯೋ ಮೂರ್ಖ ದೇಶಿಗಳೇ, ಪ್ರಜಾಪ್ರಭುತ್ವಕ್ಕೆ ಐವತ್ತು ವರ್ಷ ಪ್ರಾಯವಾಗಿದ್ದರೂ, ನಿಮಗಿನ್ನೂ ಈ ವಸ್ತುಗಳ ಪರಿಚಯವಿಲ್ಲ ಎಂದರೆ, ನಮ್ಮ

ಪ್ರಜಾಪ್ರಭುತ್ವಕ್ಕೆಯೆ ನಾಚುಗೆಗೇಡು. ಇರಲಿ ನಿಮ್ಮಂಥ ಕೆಲವು ಜನ ಇನ್ನೂ ಈ ದೇಶದಲ್ಲಿ ಉಸಿರಾಡಿಕೊಂಡಿರುತ್ತಾರೆ. ಅಂಥವರಿಗಾಗಿ ಈ ಪಾಠ ಈಗ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ರಾಜಕೀಯ ಪಕ್ಷಗಳು ಎಷ್ಟಿವೆ ಎಂದು ನಿಮಗೆ ಗೊತ್ತಿದೆಯೆ? ಇಲ್ಲ! ಗೊತ್ತಾಗಲು ಸಾಧ್ಯವೂ ಇಲ್ಲ. ಈ ರಾಜಕೀಯ ಪಕ್ಷಗಳು ಬೇರೆ ಬೇರೆ ದಿನಗಳಲ್ಲಿ ಬಂದ್‌ಗಾಗಿ ಕರೆ ಕೊಡುತ್ತವೆ. ಬಂದ್ ಕರೆ ಕೊಟ್ಟೊಡನೆಯೆ ಪಕ್ಷದ ಮುಂದಾಳು ನಮ್ಮಲ್ಲಿಗೆ ಬಂದು, ಇಲ್ಲಿಯ ಹಲವಾರು ಐಟಮ್‌ಗಳನ್ನು ರಖಂ ಆಗಿ ಖರೀದಿಸುತ್ತಾರೆ - ಬಳಿಕ ತಮ್ಮ ಹಿಂಬಾಲಕರಲ್ಲಿ ಅವುಗಳನ್ನು ಹಂಚುತ್ತಾರೆ. ಹಂಚುವುದಷ್ಟೆ ಅವರ ಕೆಲಸ. ಉಳಿದಂತೆ ಎಲ್ಲಾ ಕೆಲಸಗಳನ್ನು ಅವರ ಹಿಂಬಾಲಕರು ಯಶಸ್ವಿಯಾಗಿ ಮಾಡುತ್ತಾರೆ. ಹಾಗೆಯೆ ಎರಡು ರಾಜಕೀಯ ಪಕ್ಷಗಳ ನಡುವೆ ತಿಕ್ಕಾಟ ಆಗುವಾಗಲೂ ಈ ವಸ್ತುಗಳು ಬೇಕೇ ಬೇಕಾಗುತ್ತವೆ. ಮತದಾನದ ಸಮಯವಂತೂ ಇವುಗಳು ತೀರಾ ಅಗತ್ಯ.''

''ಇವುಗಳನ್ನು ಉಪಯೋಗಿಸಿದರೆ ದೇಶಕ್ಕೆ ನಷ್ಟವಲ್ಲವೆ?''

''ಅಯ್ಯೋ ಮಂಕುಗಳಿರಾ. ಇಂಥವುಗಳನ್ನು ನಿರಂತರವಾಗಿ ಉಪಯೋಗಿಸಿಯೆ ನಮ್ಮ ದೇಶದ ವಾರ್ಷಿಕ ಆದಾಯ ಹೆಚ್ಚಾಗುತ್ತಾ ಹೋಗಿದೆ; ಜನರ ಸರಾಸರಿ ಪ್ರಾಯವೂ ಹೆಚ್ಚಾಗಿದೆ. ಇಷ್ಟೇ ಸಾಕಲ್ಲ - ಈ ವಸ್ತುಗಳ ಉಪಯೋಗದ ಘನತೆಯನ್ನು ಹೆಚ್ಚಿಸಲಿಕ್ಕೆ'' ಎಂದರು ನಗುತ್ತಾ.

''ನೋಡಿ, ನಮ್ಮಲ್ಲಿಗೆ ಯಾರಾದರೂ ಒಂದು ಐನೂರು ಮುಂದಾಳುವಿನ ಚಿತ್ರ, ಐನೂರು ಬಾವುಟ, ನೂರು ಕೆಜಿ ಸಣ್ಣ ಸೈಜಿನ ಜಲ್ಲಿಕಲ್ಲು, ದೊಡ್ಡ ಸೈಜಿನದು ಐವತ್ತು ಕೆಜಿ ಒಮ್ಮೆಗೆಯೆ ಖರೀದಿಸಿದರೆ, ಅತಿ ದೊಡ್ಡ ಸೈಜಿನ ಹತ್ತು ಕಲ್ಲುಗಳನ್ನು ಧರ್ಮಾರ್ಥ ಕೊಡುತ್ತೇವೆ; ಏಳು ಲಾರಿ ಟಯರ್ ಕೂಡಾ. ನಿಮಗೀಗ ಇದರಲ್ಲಿ ಏನು, ಎಷ್ಟು ಬೇಕು ಹೇಳಿ'' ಎಂದು ಕೊನೆಯ ಪ್ರಶ್ನೆ ಎಸೆದೇ ಬಿಟ್ಟರು.

''ನಿಮ್ಮ ದೇಶಪ್ರೇಮ, ಪಕ್ಷ ಪ್ರೇಮಕ್ಕೆ ಮಹಾ ಭಾರತದಲ್ಲಿಯೂ ಉದಾಹರಣೆಗಳಿಲ್ಲ. ಅಷ್ಟು ಅದ್ಭುತ. ಸಧ್ಯ ನಾವು ಯಾವ ಪಾರ್ಟಿಯವರೂ ಅಲ್ಲ. ಒಂದು ಕೈಗಾರಿಕೆ ದೇಶೀಯವಾಗಿ ಹೇಗೆ ಉನ್ನತ ಸ್ಥಿತಿ ಹೊಂದಬಹುದು ಎಂಬುದನ್ನು ಕಣ್ಣಾರೆ ನೋಡಲು ಬಂದವರು ನಾವು. ನೀವಿಷ್ಟು ಕಷ್ಟ ಪಟ್ಟು ವಸ್ತುಗಳನ್ನು ತೋರಿಸಿ, ವಿವರಣೆ ಕೊಟ್ಟದ್ದಕ್ಕೆ ಧನ್ಯವಾದಗಳು. ಇದಕ್ಕಾಗಿ ನಿಮ್ಮಿಂದ ಏನನ್ನಾದರೂ ಕೊಂಡುಕೊಳ್ಳಲೇಬೇಕಲ್ಲಾ...''

''ಎರಡು ಕೆಜಿ ಸಣ್ಣ ಸೈಜಿನ ಜಲ್ಲಿ ಕಲ್ಲು...''

''ಬೇಡಪ್ಪಾ. ನಮ್ಮ ಮನೆಯ ಕಿಟಿಕಿಗೆ ಮೊನ್ನೆಯಷ್ಟೆ ನೀವು ಸಪ್ಲೈ ಮಾಡಿದ ಕಲ್ಲು ಮುತ್ತುಕೊಟ್ಟು ಆಗಿದೆ. ಸಧ್ಯ ಒಂದು ಸಾಧಾರಣ ಕೋಲು ಕೊಡಿ''.


''ಯಾಕೆ, ಕಲ್ಲು ಹೊಡೆಯುವವರನ್ನು ಓಡಿಸಲಿಕ್ಕಾ?''

''ಅಲ್ಲಪ್ಪಾ, ಬೆಳಗ್ಗೆ ತಿರುಗಾಟಕ್ಕೆ ಹೋಗುವಾಗ ಎಷ್ಟೋ ನಾಯಿಗಳು ಮಾರ್ಗದ ಮಧ್ಯೆ ಬಂದು ನಮ್ಮನ್ನು ಕಂಡು ಬೊಗಳುತ್ತವೆ. ಅವುಗಳನ್ನು ಹೆದರಿಸಲಿಕ್ಕೆ ಕೋಲು ಬೇಕಾಗುತ್ತದೆ. ಅದಕ್ಕಾಗಿ...''

''ನಾಯಿಗಳನ್ನು ಓಡಿಸಲಿಕ್ಕೆ ಈ ಸಾಂಸ್ಕೃತಿಕ ಮೌಲ್ಯದ ಕೋಲು ಕೊಡಬೇಕೇ? ಎಂಥಾ ನೀಚ ಅಭಿಪ್ರಾಯ ನಿಮ್ಮದು?''

''ಏಕೆ, ನಾಯಿಗಳು ನಮ್ಮ ಸಂಸ್ಕೃತಿಯ ಒಂದು ಅಂಗವಲ್ಲವೇ? ಧರ್ಮರಾಯನನ್ನು ಕೊನೆ ತನಕ ಹಿಂಬಾಲಿಸಿದ್ದು ಯಾರು? ಅಷ್ಟೂ ಗೊತ್ತಿಲ್ಲವೇ ನಿಮಗೆ?''

ನಾವಷ್ಟನ್ನು ಹೇಳಿದ್ದೇ ತಡ, ಅಂಗಡಿಯ ಮಾಲಿಕರು ''ಮುಂದೆ ಎಂದಾದರೂ ನಿಮಗೆ ನಮ್ಮ ವಸ್ತುಗಳು ಬೇಕೆಂದಾಗ ಇಲ್ಲಿಗೆಯೆ ಬನ್ನಿ. ಐವತ್ತು ಶೇಕಡಾ ರಿಯಾಯಿತಿಯಲ್ಲಿ ಕೊಡುತ್ತೇವೆ. ಯಾಕೆಂದರೆ, ನಮ್ಮ ಸಂಸ್ಕೃತಿಯ ಆಳವಾದ ಜ್ಞಾನ ನಿಮಗಿದೆ - ಇಂಥಾ ಜ್ಞಾನ ಪ್ರಜಾ ಪ್ರಭುತ್ವಕ್ಕೆ ಬೇಕೇ ಬೇಕು - ಹಾಗೆಯೇ ನಮ್ಮ ಈ ವಸ್ತುಗಳು ಕೂಡಾ'' ಎನ್ನುತ್ತಾ ಬೆಳ್ಳಿಕಟ್ಟಿನ ಒಂದು ಕೋಲನ್ನು ಗಂಭೀರವಾಗಿ ನಮ್ಮತ್ತ ಚಾಚಿದರು, ಗುಗ್ಗುಡಿ ಕೈಗಾರಿಕೆಯ ಮಾಲಿಕರು.



ಸಂಕೋಚಕ ಸ್ವಭಾವ

– ಎಂ.ಎಸ್.ಕೆ.

ಒಮ್ಮೆ ನಾನು ನನ್ನ ಒಬ್ಬ ಸ್ನೇಹಿತರನ್ನ "ನಿಮ್ಮ ಬಾಸ್ ಹೇಗ್ರೀ" ಅಂತ ಕೇಳ್ದೆ. ಅದಕ್ಕೆ ಅವರು he is otherwise an excellent man. His only fault is that he does not know how to say NO. ಅರ್ಥಾತ್ ದಾಕ್ಷಿಣ್ಯ ಅಥವಾ ಸಂಕೋಚ, ಅಥವಾ ಪುಕ್ಕಲು ಸ್ವಭಾವದವ. ಈ ದಾಕ್ಷಿಣ್ಯ ಸ್ವಭಾವ ವಿಪರೀತವಾದಾಗ ಎಡವಟ್ಟು ಆಗೋದು ಸಹಜ. ಅದಕ್ಕೇ ಅಲ್ಲವೆ "ದಾಕ್ಷಿಣ್ಯಕ್ಕೆ ಸಿಕ್ಕಿ ಹಾಕ್ಕೊಂಡು ಏನೇನೋ ಮಾಡ್ಕೊಂಡ್ರು" ಅನ್ನೋದು. ಗಟ್ಟಿಯಾಗಿ, ಕೇಳಿದವರ ಕಣ್ಣಿಗೆ ಕಣ್ಣಿಟ್ಟು ನೋಡ್ತ "ಇಲ್ಲಾ, ನೀವು ಕೇಳ್ತಾ ಇರೋದು ಆಗೋದಿಲ್ಲಾ. ಅದು ನನ್ನಿಂದ ಸಾಧ್ಯ ಇಲ್ಲ". ಅಂತ ಘಂಟಾಘೋಷವಾಗಿ ಹೇಳಲಿಕ್ಕೆ ಈ ಥರ ದಾಕ್ಷಿಣ್ಯ, ಪುಕ್ಕಲು ಅಥವಾ ಸಂಕೋಚ ಸ್ವಭಾವದವರಿಂದ ಖಂಡಿತ ಸಾಧ್ಯ ಇಲ್ಲ.

ಕೆಲವು ಸಲ ದಾಕ್ಷಿಣ್ಯ, ಸಂಕೋಚ ಇಲ್ಲದ ಹೆದರಿಕೆ ಇವೆಲ್ಲಾ ಬಿಟ್ಟು ಮನಸ್ಸಿಗೆ ಬಂದದ್ದು ಮುಖಕ್ಕೇ ಸರಿಯಾಗಿ ಯಾವ ಮುಲಾಜೂ ಇಲ್ಲದೆ ಹೇಳಿಬಿಡಬೇಕೂನ್ಸತ್ತೆ. ಆದರೆ ಅನ್ಬೇಕೂಂತ ಅನ್ಕೊಳೋದೇ ಒಂದು, ಕೊನೇಗೆ ಅನ್ನೋದೇ ಒಂದು.

1. ಮನೇಗೆ ಬಂದ ಆ ಮನುಷ್ಯ ಲಂಗೂ ಲಗಾಮೂ ಇಲ್ಲದೆ ಹೊಡೀತಿದ್ದ ಬೋರು. ಇವನ ಹಿಂದಿನ ಮತ್ತು ಮುಂದಿನ ಟೂರುಗಳು, ಇವ ಇತ್ತೀಚೆಗೆ ಭೇಟಿ ಮಾಡಿದ ರಾಜಕಾರಣಿಗಳು, ಇವನು ತನ್ನ ಕುಟುಂಬಕ್ಕೆ ಮಾಡಿಸಿದ ಒಡವೆಗಳು, ಇವೇ ಅವನ ಅಂದಿನ ಸಬ್ಜೆಕ್ಟ್ಸ್. ಇವ ಬಂದಿರೋದು ಸಾಲಾ ಕಿತ್ತುಕೊಂಡು ಹೋಗೋಕೇಂತ ಎಲ್ಲಾರಿಗೂ ಗೊತ್ತು. ಈತ ತಗೊಂಡ ಸಾಲಾ ಈ ಜನ್ಮದಲ್ಲಿ ಈ ತನಕ ಯಾರಿಗೂ ವಾಪಸ್ ಮಾಡಿಲ್ಲಾಂತ ಎಲ್ಲಾರ್ಗೂ ಗೊತ್ತು. ಇವನ ಸ್ಟಾಂಡರ್ಡ್ ಮಾತು "ನೋಡಿ ಇವರೇ, ನಾನು ಸುಳ್ಳು ಹೇಳಿದ್ರೂ ನಂಬ್ತೀರಾ, ನಿಜ ಹೇಳಿದ್ರೂ ನಂಬ್ತೀರಾ. ನನಗೆ ಇಷ್ಟೊಂದು ಆಸ್ತೀ ಇದ್ದರೂ ಕೈಲೀ ಕ್ಯಾಷ್ ಇಲ್ಲ--"

ನಾನು ಅವನ ಮುಖಕ್ಕೆ ಹೇಳ್‌ಬೇಕೂಂತ ಅಂದ್ಕೊಂಡಿದ್ದು: 'ಅಲ್ರೀ ಮಾರಾಯ್ರೆ ನೀವು ಹೇಳೋದೆಲ್ಲಾ ಸುಳ್ಳೂಂತ ಕೇಳಿಸ್ಕೋತಿರೋ ನಂಗೂ ಗೊತ್ತು, ಹೇಳ್ತಿರೋ ನಿಮಗೂ ಗೊತ್ತು. ನೀವು ಯಾಕ್ ಬಂದಿದೀರಾಂತ ನಂಗೆ

ಚೆನ್ನಾಗಿ ಗೊತ್ತು. ಈ ಪೀಠಿಕೆ ಬಂದ್ ಮಾಡ್ರಿ. ನೀವು ಈ ಜನ್ಮದಲ್ಲಿ ಎಂದಾದರೂ ನಿಜ ಹೇಳಿದೀರಾ? ನಾನೇನು ಬೇಕೂಫನೆ ನೀವು ಹೇಳಿದ್ದೆಲ್ಲಾ ನಂಬೋಕೆ? ನಿಮಗೆ ಆಸ್ತೀ ಎಷ್ಟಿದೆ, ಅದರಮೇಲೆ ಯಾವ್ಯಾವ ಕೋರ್ಟ್ನಲ್ಲಿ ಯಾವ್ಯಾವ ತಕರಾರಿದೆ ಅದೆಲ್ಲಾ ನಂಗೊತ್ತಿಲ್ವೇ. ನೇರವಾಗಿ ಪಾಯಿಂಟಿಗೆ ಬನ್ನ್ರೀ. ನೀವ್ ಅದೇನು ಹೇಳ್ಬೇಕೂಂತಿದೀರೋ ಅದನ್ನ ಬೇಗ್ ಬೇಗ ವದರಿ ಇಲ್ಲಿಂದಾ ಜಾಗಾ ಖಾಲೀ ಮಾಡಿ'' ಅಂತ. ಆದರೂ ಈ ಸಂಕೋಚ ಸ್ವಭಾವ ನೋಡಿ. ಅದರಿಂದ ಅಂದಿದ್ದು: ಹಿ ಹಿ ಹೀ. ನೀವು ಹೇಳೋದು ಸರೀನೇ. ನಾನು ಸ್ವಲ್ಪ ಪಂಗೇಯು. ಈಸಿಯಾಗಿ ಎಲ್ಲಾರ್ ಹೇಳಿದ್ದೂ ನಂಬೇಬಿಡ್ತೀನಿ. ಹೇಳಿ ಹೇಳಿ.

2. ಬೆಳಗಾಗೆದ್ದು ನಾಲ್ಕು ಧಾಂಡಿಗರು ರೂಂ ಬಾಗಿಲ್ನ ತಳ್ಳಿಕೊಂಡೇ ಒಳಗೆ ನುಗ್ಗಿದರು. ಬಿಳೀ ಪಾಂಟು, ಬುಶ್ ಷರ್ಟು ಹಾಕಿದ್ರು. ಎಲ್ಲಾರ ಹೊಟ್ಟೆ ಅವರು ಕಟ್ಟಿದ್ದ ಬೆಲ್ಟ್ ಮೇಲೆ ಆರಿಂಚು ಓವರ್‌ಹಾಂಗ್ ಆಗಿತ್ತು. (ಅದನ್ನ ನೋಡಿ ಇತ್ತೀಚೆಗೆ ಒಬ್ಬ ಅಮೆರಿಕಾದಿಂದ ಬಂದಿದ್ದ ಡಾಕ್ಟರು "the average indian male is five months pregnant' ಅಂತ ಹೇಳಿದ್ದು ಧಿಡೀರ್ ಅಂತ ಜ್ಞಾಪಕಾ ಬಂತು) ಬಂದ ನಾಲ್ಕೂ ಜನ ಕೂತ ರಭಸಕ್ಕೆ ನನ್ನ ಮುರುಕಲು ಕುರ್ಚಿಗಳು ಕಿರ್ರೋ ಅಂತ ಕೂಗಿಕೊಂಡ್ವು. ಅವರ ಬಾಯಿ ತುಂಬಾ ತಂಬಾಕು. ಬೆರಳ್ ತುಂಬಾ ಮಲ್ಟಿ ಕಲರ್ ಉಂಗುರಗಳು. ಕೈಲಿ ಒಂದು ಚಂದಾ ಬುಕ್ಕು, ಒಂದಿಷ್ಟು ಫಾಂಪ್ಲೆಟ್ಸ್. ಇವರೆಲ್ಲಾ ಬರೋದು ಚಂದಾ ವಸೂಲಿಗೆ. ಕಾರಣ ಬೇಕೇ? ನೂರೆಂಟು ದೇವಸ್ಥಾನದ ಗೋಪುರ ಕಟ್ಟಿಸ್ತಿದ್ದೀವಿ. ಬೊಂಬಾಟ್ ಆಗಿ ರಾಜ್ಯೋತ್ಸವ ಮಾಡ್‌ಬೇಕು, ಗಣೇಶನ ಹಬ್ಬ ಬರ್ತಾಯಿದೆ. ಪುಗುಸಟ್ಟೆ ದುಡ್ಡು ಕೀಳೊಕೆ ಕಾರಣಗಳು ಬೇಕೆ?

ಅವರ ಲೀಡರ್ ಗಂಟಲು ಸರಿ ಮಾಡ್ಕೊಂಡು ''ಈ ಸಲ ಗಣೇಶನ್ನ ಬಹಳ ಧಾಂ ಧೂಂ ಇಂದ ಮಾಡ್ಬೇಕು. 20 ಅಡಿ ಗಣೇಶನಿಗೆ ಆಗಲೇ ಆರ್ಡರ್ ಕೊಟ್ಬಿಟ್ಟಿದ್ದೀವಿ. ಹತ್ತು ದಿನ ಪ್ರೋಗ್ರಾಂ. ಮಿನಿಸ್ಟರ್ಗಳು, ಫಿಲ್ಮ್ ನಟ, ನಟಿಯರು ಬರೊದಕ್ಕೆ ಒಪ್ಪಿಕೊಂಡಿದಾರೆ. ನಿಮ್ಮಿಂದ .... ಸಾವಿರ ರೂಪಾಯಿ ಚಂದಾ ಬರ್ಕೊಂಬಿಟ್ಟಿದ್ದೀವಿ. ''... ಇತ್ಯಾದಿ ಹಳೆ ಪುರಾಣಾ ಬಿಚ್ಚಿದ.

ನಂಗೋ ಕೋಪಾ ನೆತ್ತೀಗೇರಿತ್ತು. ಮೈಯೆಲ್ಲಾ ಉರೀಲಿಕ್ಕೆ ಹತ್ತಿತ್ತು. ಅನ್ಬೇಕೂ ಅಂತ ಅನ್ಕೊಂಡಿದ್ದು; ''ಓಹೋ. ಯಾಕೇ, ನಿಮ್ಮ ಬೂಜಿಗೆ ದುಡ್ಡು ಕಡಿಮೆಯಾಗಿಹೋಯಿತಾ? ಬೆಳಗಾಗೆದ್ದು ನನ್ನ ಬಿಟ್ಟರೆ ನಿಮಗೆ ಬೇರೆ ಯಾವ ಬಕರಾನೂ ಸಿಕ್ಕಲಿಲ್ವಾ? ಹೋದ ವರ್ಷಾನೂ ಹೀಗ್ ಮಾಡ್ತೀವಿ, ಹಾಗ್ ಮಾಡ್ತೀವಿ ಅಂತ ದುಡ್ಡು ಪೀಕಿಸಿಕೊಂಡು ಹೋದ್ರೆಲ್ಲಾ, ಅದಕ್ಕೆ ಅಕೌಂಟ್

ಎಲ್ರೀ? ನೀವ್ ಮಾಡೋ ಸೋಷಿಯಲ್ ಕೆಲಸ ನಂಗೊತ್ತಿಲ್ವೇ, ರಾತ್ರಿ ಪಸಜ ಬಾರೋ, ಇಲ್ಲಾ ಸೋಷಿಯಲ್ಲೋ ಅಲ್ಲಿ ನೀವು ನಡೆಸೋ ಕಾರ್ಯಕ್ರಮ ನಾನ್ ನೋಡಿಲ್ವೇ? ಹೋದ್ ವರುಷಾ ಪಾಪ ಆ ಗಣೇಶನ ಮುಂದೆ ಆ ಹೊಲಸು ನಾಟಕ ಆಡಿಸಿದ್ರೆಲ್ಲಾ, ನಾಚ್ಗೆ ಆಗೋದಿಲ್ವಾ ನಿಮಗೆಲ್ಲಾ. ನಾನೇನ್ ಹಗೇವ್ ನಲ್ಲಿಟ್ಟಿದ್ದೀನ ದುಡ್ಡಿನ ಗಂಟು, ನೀವ್ ಬಂದಾಗೆಲ್ಲಾ ಎತ್ತೆತ್ತಿ ಕೊಡೋಕೆ. ಬಿಡ್ರೀ ಇಲ್ಲಿಂದಾ ನಿಮ್ಮ ಬಂಡೀನಾ...'' ಅಂತ.

ಆದರೆ ಪುಕ್ಕಲು ಸ್ವಭಾವ ನೋಡಿ. ಬಡವನ ಕೋಪಾ, ದವಡೆಗೆ ಮೂಲಾ ಅನ್ನೋ ಹಾಗೆ ಸುಂ ಸುಂನೆ ಇವರನ್ನ ಯಾಕೆ ಎತ್ತಿ ಮೇಲ್ ಹಾಕ್ಕೋಬೇಕೂಂತ ನಿಜವಾಗಿ ಅಂದ್ಕಿದ್ದು; (ಯಾರಪ್ಪಾ ಅಲ್ಲೀ. ಲೀಡರ್ಗಳು ಬಂದಿದ್ದಾರೆ. ಎಲ್ಲೀ ನಾಲ್ಕು ಟೀ ತನ್ನೀ ಬೇಗಾ). ನಿಜ ನಿಜ. ಹೋದ ವರ್ಷ ನೋಡಿದ್ನೆಲ್ಲ. ಬಹಳ ಚೆನ್ನಾಗಿ ಬಂತು ಪ್ರೋಗ್ರಾಂ. ನೀವು ಬಹಳ ಕಷ್ಟದಿಂದಾನೇ ಮಾಡಿದ್ರೀ. 20 ಅಡಿ ಗಣೇಶಾ ಅಂದ್ರೇನು ಸುಮ್ಮನೇನಾ. ಅದನ್ನ ತರೋದೂ, ಅದರ ವಿಸರ್ಜನೆ ಅಂದ್ರೆ ಸುಮ್ಮನೇನಾ? ಆದ್ರೂನೂವೇ ನಮಗೂ ಹಿ ಹಿ ಹೀ ಬಹಳಾ ಟೈಟ್ ಆಗಿದೆ ಕಂಡೀಶನ್ನೂ. ಬಿಸಿನೆಸ್ ಬಹಳಾನೇ ಡಲ್ಲೂ. ನಿಮಗೇ ಗೊತ್ತಿದೆಯಲ್ಲಾ ಇಂದಿನ ಎಕನಾಮಿಕ್ ಸಿಚುಯೇಷನ್ನೂ. ದುಡ್ಡೇ ಬರ್ತಿಲ್ಲಾ. ಈ ಸಧ್ಯಕ್ಕೆ ಇಷ್ಟು ಇಟ್ಕೊಂಡಿರೀ. ಆಮೇಲೆ ನೋಡೋಣ.... ಹೆ ಹೆ ಹೆ ಹೆ.

3. ನಾನ್ ಸ್ಟಾಪ್ ಬಸ್ನಲ್ಲಿ ಕೂತಿದ್ದೆ. ಮೂರು ಜನರ ಸೀಟು. ಪಕ್ಕದೋರೆಲ್ಲಾ ಭಾರೀ ಇಸಂಗಳು. ದಟ್ಟೀ ಪಂಚೆ ಉಟ್ಟು ಹೆಗಲ ಮೇಲೆ ಟವಲ್ ಹಾಕಿದ್ದ ವ್ಯಕ್ತಿ. ''ಸ್ವಲ್ಪ ಹಾಗನ್ನಿ. ನಾನೂ ಕೂತ್ಕೋತೀನಿ. ನಿಂತೂ ನಿಂತೂ ಕಾಲ್ ನೋಯ್ತಿದೇ'' ಅಂದ. ನಾನು ನನ್ನ ಪಕ್ಕದವರನ್ನ ನೋಡ್ದೆ. ಕೇಳಿಸ್ದೇ ಇರೋರ್ ತರ ಆಕಡೇ ನೋಡ್ತಿದ್ರು. ಅವರನ್ನ ''ಸ್ವಲ್ಪ ವತ್ಕೊಳ್ಳೀ'' ಅಂತ ಕೇಳೋಕೆ ಭಯ ಮಿಶ್ರಿತ ಸಂಕೋಚ. ಈ ಧಡಿಯನಿಗೆ ''ಇಲ್ಲೆಲ್ರೀ ಜಾಗಾ ಇದೆ. ನಾನೇ ಅರ್ಧ ಕೂತ್ಕೊಂಡಿದೀನಿ'' ಅಂತ ಹೇಳೋಕೆ ಹೆದರಿಕೆ. ಹಾಗೂ ಹೀಗೂ ನೋಡ್ದೆ. ಗುರ್ ಗುರ್ ಶಬ್ದ ಮಾಡ್ದೆ. ಧಡಿಯನಿಗೆ ಇವನೊಬ್ಬಾ ಪೆಕರಾ ಅನ್ನೋದು ಗೊತ್ತಾಗ್ ಹೋಯ್ತು. ಶಿವನೇ ಅಂತ ಹೇಳ್ಕೊಂಡು ಉಸ್ಸಪ್ಪಾ ಅಂತ ನನ್ನ ತೊಡೇ ಮೇಲೇ ಕುಕ್ಕರಿಸಿದ. ಭಾರಾ ತಡೀಲಾರ್ದೆ ತೊಡೆ ಮೇಲೆತ್ತಿಕೊಂಡು ಆ ಭಂಗೀಲೇ ಈ ಮೂರೂ ಜನರ ಮಧ್ಯ ಕೂತೆ.


ಅದಕ್ಕೇ ಅಲ್ವಾ ದೊಡ್ಡೋರು ಹೇಳಿದ್ದು; ಬಡಿಸೋರ್ಗೆ ಹೆದರಿಕೊಂಡ್ರೆ ಊಟಾ ಖೋತಾ ಅಂತ. ಮೆತ್ತಗಿರೋರು ಮೊಣಕೈಲೀ ತಿವಿಸ್ಕೊಂಡ್ರು ಅಂತ. ಈ ಥರ ಸಂಕೋಚಾ, ದಾಕ್ಷಿಣ್ಯಕ್ಕೆ ಬಿದ್ದರೆ ಬಸ್ನಲ್ಲಿ ಸೀಟೂ ಲಾಸು, ಕೈಯಲ್ಲಿದ್ದ ಕಾಸೂ ಲಾಸು.

ಯಾರಾದರೂ ಕಂಡು ಹಿಡಿಯ ಬಾರದೇ!

– ಶಿವು


ನಮ್ಮ ವಿಜ್ಞಾನಿಗಳು ಏನೇನೋ ಕಂಡುಹಿಡಿಯುತ್ತಾರೆ. ಮೈಕ್ರೋ ವೇವ್ ಅಂತೆ, ಮೊಬೈಲ್ ಅಂತೆ. ಎಲ್ಲಾ ದುಬಾರಿ ಸಮಾಚಾರ. ಅದರ ಬದಲು ನಾಲ್ಕು ಜನಕ್ಕೆ ಉಪಯೋಗ ಆಗೋ ಅಂಥಾ ಸಾಮಗ್ರಿನ ಕಂಡುಹಿಡಿದರೆ ಎಷ್ಟು ಚೆನ್ನಾಗಿರುತ್ತೆ ಅಲ್ಲ. ಅಂತಹ ಜನಸೇವಾ ಮನೋಭಾವ ಇರೋ ವಿಜ್ಞಾನಿಗಳಿಗೆ ಸಹಾಯ ಆಗ್ಲೀ ಅಂತ ಕೆಳಗೆ ಕೆಲವು ಐಡಿಯಾಗಳನ್ನ ಕೊಟ್ಟಿದ್ದೇನೆ. ಈ ಐಡಿಯಾಗಳನ್ನ ಕಾರ್ಯರೂಪಕ್ಕೆ ತಂದ್ರೆ ನಮ್ಮ ಕಮಿಷನ್ ಮಾತ್ರಾ ಮರೀಬೇಡಿ.

ಬಾಲ್‌ಪೆನ್ ಸಾರ್ಟರ್:



ನಿಮಗೇ ಗೊತ್ತು. ಬರೆಯುಕ್ಕೆ ಅಂತ ಒಂದು ಬಾಲ್‌ಪೆನ್ ತೆಗೆದರೆ ಅದು ಬರೆಯುತ್ತದೆಯೇ. ಖಂಡಿತಾ ಇಲ್ಲ. ಈ ಉಪಕರಣದಲ್ಲಿ ನಿಮ್ಮ ಬಳಿ ಇರೋ ಎಲ್ಲ ಬಾಲ್ ಪೆನ್ನುಗಳನ್ನೂ ಹಾಕಿಬಿಟ್ಟು, ಸ್ವಿಚ್ ಒತ್ತಿದರೆ ಸಾಕು. ಚೆನ್ನಾಗಿ ಬರೆಯುವ ಬಾಲ್‌ಪೆನ್ ಮಾತ್ರಾ ಉಪಕರಣದ ಬಟ್ಟಲಲ್ಲಿ ಬಂದು ಬೀಳುತ್ತದೆ. ಮಿಕ್ಕ ಪೆನ್‌ಗಳನ್ನು ಈ ಯಂತ್ರ ನುಗ್ಗು ನುರಿಯಾಗುವಂತೆ ಪುಡಿಮಾಡಿ ಅದನ್ನು ಗಾಳಿಗೆ ತೂರಿಬಿಡುತ್ತದೆ.

ಸಾಕ್ಸ್ ರಿಟ್ರೀವರ್



ನಿಮಗೆ ಹೇಗೋ ತಿಳಿಯದು. ನಮ್ಮ ಮನೆಯಲ್ಲಂತೂ ಒಂದು ಪುಟಾಣಿ ಬ್ಲಾಕ್ ಹೋಲ್ ಇದೆ. ಒಂದು ಜೊತೆ ಸಾಕ್ಸ್‌ನಲ್ಲಿ ಒಂದನ್ನು ಮಾತ್ರ ನುಂಗಿಬಿಡುವುದು ಅದರ ಚಾಳಿ. ಉದಾಹರಣೆಗೆ ನಿಮ್ಮ ಬಳಿ ಒಂದು ಜೊತೆ ನೀಲಿ, ಒಂದು ಜೊತೆ ಕೆಂಪು

ಕಾಲುಚೀಲಗಳಿವೆ ಎಂದುಕೊಳ್ಳಿ. ಒಂದು ವಾರದ ನಂತರ ಯಾವುದೋ ಮಾಯದಲ್ಲಿ ಒಂದು ಕೆಂಪು ಒಂದು ನೀಲಿ ಕಾಲುಚೀಲ ಮಾತ್ರಾ ಉಳಿದಿರುತ್ತದೆ. ಆ ಸಾಕ್ಸ್ ರಿಟ್ರೀವರ್ ಉಪಕರಣ ಸಾಕ್ಸ್‌ಗಳಿಗೆ ರೇಡಿಯೋ ಐಸೋಟೋಪ್ಸ್‌ಗಳನ್ನು ಹೊಂದಿಸಿ, ಅದು ಎಲ್ಲಿರುವುದೆಂಬುದನ್ನು ಪತ್ತೆ ಹಚ್ಚಿ, ತೆರೆಯ ಮೇಲೆ ಅದು ಇರುವ ಜಾಗವನ್ನು ತೋರಿಸಿ ಬಿಡುತ್ತದೆ. ಆಮೇಲೆ ಆ ಬ್ಲಾಕ್ ಹೋಲ್ ಗತಿ ನಾಯಿಪಾಡು!


ರಿಪ್ಲೈ ಮೆಷೀನ್

ನನ್ನ ತಮ್ಮನ ಮನೆಯಲ್ಲಿ ಈಚೆಗೆ ಒಂದು answering machine ಇರಿಸಿದ್ದಾರೆ. ಅವನಿಲ್ಲದಾಗ ನಾನೇನಾದರೂ ಅವನಿಗೆ ಫೋನಾಯಿಸಿದರೆ ಎರಡು ರಿಂಗ್‌ಗಳ ನಂತರ ರಿಸೀವರ್ ಎತ್ತಲ್ಪಡುತ್ತದೆ. ಅನಂತರ ಐದು ಸೆಕೆಂಡುಗಳ ನೀರವತೆ. ಆಮೇಲೆ ಪಾತಾಳದಿಂದ ಒಂದು ದನಿ ಹೊರಹೊಮ್ಮುತ್ತದೆ. ''ನೀವು ಡಾ|| ಓಂಪ್ರಕಾಶ್‌ರ ಮನೆ ಸೇರಿದ್ದೀರ. (ನಾನೆಲ್ಲಿ ಸೇರಿದೆ?) ಅವರೀಗ ಇಲ್ಲಿಲ್ಲ. ಏನಾದರೂ ಸಂದೇಶ (ಮೇಘ) ಇದ್ದರೆ ಬೀಪ್ ನಂತರ ಅದನ್ನು ಹೇಳಿ ... ಬೀಪ್'' ಇದು answering machine. ಈ ಮೆಷೀನ್‌ಗೆ ನಾನು ಉತ್ತರಿಸಬೇಕಂತೆ. ನಾನು ಸಜೆಸ್ಟಿಸಿರುವ ರಿಪ್ಲೈ ಮೆಷೀನನ್ನು ನನ್ನ ಟೆಲಿಫೋನಿಗೆ ಅಳವಡಿಸಿದ್ದರೆ ಅದರ ಕಥೆಯೇ ಬೇರೆ. ಆ ಕಡೆ ಬೀಪ್ ಕೇಳಿಸಿದ ತಕ್ಷಣ ನಮ್ಮ ರಿಪ್ಲೈ ಮೆಷೀನ್ ತನ್ನ ಕಥೆ ಶುರು ಹಚ್ಚುತ್ತದೆ. ''ನಾನು ಶಿವಕುಮಾರ್ ಅಲ್ಲ. ಕೇವಲ ಅವರ ರಿಪ್ಲೈ ಮೆಷೀನ್. ಸಂದೇಶ ಕೊಡಲು ನಾನೇನು ರಾಜಕಾರಣಿ ಕೆಟ್ಟುಹೋದೆನೇ. ಅದು ಸರಿ, ನಿನ್ನ ಪರಿಸ್ಥಿತಿ ಹೇಗಿದೆ? ಕಾಲಕಾಲಕ್ಕೆ ಬ್ಯಾಟರಿ ಛಾರ್ಜ್ ಆಗುತ್ತೆ ತಾನೆ...'' ಅಂತೆಲ್ಲಾ ಹರಟೆ ಹೊಡೆದು ಸಂಭಾಷಣೆ ಮುಗಿಸುತ್ತದೆ. ನಾನು ಒಂದು ಯಃಕಶ್ಚಿತ್ ಯಂತ್ರದೊಂದಿಗೆ ಮಾತನಾಡಬೇಕಾದ ಅಗತ್ಯ ತಪ್ಪುತ್ತದೆ.

ರಿಸೀವಿಂಗ್ ರೋಬಟ್

ಈಚೀಚೆಗೆ, ಮಾರ್ಕೆಟ್ ಎಕಾನಮಿ ಶುರುವಾದಾಗಿನಿಂದ ಈ ಸೇಲ್ಸ್ ಗರ್ಲ್ ಯಾ ಬಾಯ್ಸ್‌ಗಳ ಹಾವಳಿ ಅತಿಯಾಗಿದೆ. ಅವು ಬರೋ ಸಮಯವೋ ಮಠಮಠ ಮಧ್ಯಾಹ್ನ. ''ಟ್ರಿಂಗ್'' ಅಂತ ಕಾಲಿಂಗ್ ಬೆಲ್ಲು. ಯಾರೋ ಏನೋ ಅಂತ ನಿದ್ದೆಯಿಂದೆದ್ದು ಓಡಿ ಹೋಗಿ ನೋಡಿದರೆ ಈ ಹೀಚುಗಳು. ಅವುಗಳ ಮುಗ್ಧ ಮುಖಗಳನ್ನು ನೋಡಿದರೆ ರೇಗುಕ್ಕೂ ಮನಸ್ಸು ಬರುಲ್ಲ. ಸರಿ,

ಅರ್ಧಂಬರ್ಧ ಅವುಗಳ ಮಾತು ಕೇಳಿ, ಅವರು ಮಾರುವ ಸರಕು ನಮಗೆ ಅಗತ್ಯವಿಲ್ಲ ಎಂದು ಕನ್ವಿನ್ಸ್ ಮಾಡುವ ಹೊತ್ತಿಗೆ ಸಾಕುಬೇಕಾಗಿರುತ್ತೆ. ಈ ಜ್ವಲಂತ ಸಮಸ್ಯೆಗೆ ಉತ್ತರ? ಹೀಗೆ ಬನ್ನಿ. ಮೀಟ್ ಅವರ್ ಫ್ರೆಂಡ್ ದ ರಿಸೀವಿಂಗ್ ರೋಬಟ್.



ಕಂಪ್ಯೂಟರ್ ನಿಯಂತ್ರಿತ ಈ ರೋಬಟ್‌ಗೆ ಸೇಲ್ಸ್ ಪಡೆಯ ಪರಿಚಯವನ್ನು ಮೊದಲೇ ಪ್ರೋಗ್ರಾಂ ಮಾಡಿರುತ್ತಾರೆ. ಈ ಜನ ಒಳಗೆ ಬರುತ್ತಿರುವಾಗಲೇ ನಮ್ಮ ರೋಬಟ್ ಅವರ ಉತ್ಸಾಹ, ಹಟಮಾರಿತನ, ಇವುಗಳನ್ನು ಗುರುತಿಸಿ ಅವರು ಸೇಲ್ಸ್ ಪಡೆಯವರೆಂದು ನಿರ್ಧರಿಸಿಬಿಡುತ್ತಾನೆ. ಅವರು ಬೆಲ್ ಮಾಡಿದ ತಕ್ಷಣ ನಮ್ಮ ರಿಸೀವರ್ ಮುಂದೆ ಹೋಗಿ ''ನಾನೇ ಈ ಮನೆಯ ಮಾಲಿಕ. ಮುಂದೆ ಮಾತನಾಡುವ ಮೊದಲು ಸೌಜನ್ಯಕ್ಕಾಗಿ ನನ್ನ ಕೈ ಕುಲುಕಿ'' ಎನ್ನುತ್ತಾ ತನ್ನ ಹಸ್ತವನ್ನು ಮುಂದೆ ಚಾಚುತ್ತಾನೆ. ಆ ಕಬ್ಬಿಣದ ಹಸ್ತದ ವೈಖರಿ ನೋಡಿಯೇ ಬಂದ ಅಭ್ಯಾಗತರು ಓಡುತ್ತಾರೆ.

ನಿಮಗೂ ಇಂತಹ ಗೃಹೋಪಯೋಗಿ ವಸ್ತುಗಳು ಹೊಳೆದರೆ ಖಂಡಿತಾ ಬರೆದು ತಿಳಿಸಿ. ಬರ್‍ಲಾ... ಟಾ...ಟಾ...



Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010. Editor : M. SHIVAKUMAR